ಡಾ: ಹೆಚ್.ಸಿ. ಮಹದೇವಪ್ಪ : ಇನ್ನೂ ಪ್ರಸ್ತಾಪ ಮಾಡಿಲ್ಲ. ಇದಕ್ಕೆ submission ಮಾಡಿಲ್ಲ.

ಅಧ್ಯಕ್ಷರು : ಬೆಳಿಗ್ಗೆ submission ಮಾಡಿದ್ದಾರೆ. ನೀವು ಇರಲಿಲ್ಲ.

5. ವಿತ್ತೀಯ ಕಾರ್ಯಕಲಾಪ :

2012–13ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮೇಲೆ ಚರ್ಚೆ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2012–13ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಇದರ ಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕು. ಇದನ್ನು ಈಗಾಗಲೇ ಮಂಡಿಸಿದ್ದೇನೆ. ಇವತ್ತು Supplementary Budget ಬಗ್ಗೆ ಈಗೇನು ಮಂಡನೆ ಮಾಡಿದ್ದೇವೆ ಅದರ ಪೂರಕ ಅಂದಾಜುಗಳ ಒಟ್ಟು ಮೊತ್ತ 9,197 ಕೋಟಿ ರೂ.ಗಳು. ಎರಡನೇ ಕಂತಿನಲ್ಲಿ ಸಾಮಾನ್ಯ ರಾಜಸ್ವದಿಂದ ಹೊರ ಹೋಗುವ ಮೊತ್ತ 5,572 ಕೋಟಿ ರೂ.ಗಳು. ಒಟ್ಟು 9,197 ಕೋಟಿ ರೂ.ಗಳು. ಇದರಲ್ಲಿ ಬೆಳೆ ಸಾಲ ಮನ್ನಾ ಯೋಜನೆ ಸಲುವಾಗಿ ನಾವು ಪೂರಕ ಅಂದಾಜಿನಲ್ಲಿ 1,815 ಕೋಟಿ ರೂ.ಗಳನ್ನು Supplementary Budget ನಲ್ಲಿ approval ಗಾಗಿ ಕೇಳುತ್ತಿದ್ದೇವೆ. ಸಾಲ ಮನ್ನಾ ಯೋಜನೆಗಳನ್ನು ನಾವೇನು ಕಳೆದ ಅಧಿವೇಶನದಲ್ಲಿ ಘೋಷಣೆ ಮಾಡಿದ್ದೇವೆ ಆ ಹಿನ್ನೆಲೆಯಲ್ಲಿ 3,600 ಕೋಟಿ ರೂ.ಗಳಷ್ಟು ನಮ್ಮ ಬಜೆಟ್ ಮೇಲೆ ಭಾರ ಬೀಳುವಂತಹದ್ದು, ಈ ವರ್ಷದ Supplementary Budget ನಲ್ಲಿ 1,815 ಕೋಟಿ ರೂ.ಗಳಿಗೆ ನಾವು approval ಕೇಳುತ್ತಿದ್ದೇವೆ. ಅದಕ್ಕೆ ದಯವಿಟ್ಟು ಅನುಮತಿಯನ್ನು ಕೊಡಬೇಕು. ಪರಿಷ್ಕೃತ ವೇತನ ಶ್ರೇಣಿ, Revision of the salary ಗಾಗಿ 1,442 ಕೋಟಿ ರೂ.ಗಳನ್ನು ಕೇಳಿದ್ದೇವೆ. ಗ್ರಾಮೀಣ ವಿದ್ಯುದೀಕರಣದಿಂದ ಉಂಟಾದ ನಷ್ಟಕ್ಕಾಗಿ ನಮ್ಮ KERC ನಿರ್ದೇಶನದಂತೆ ಗ್ರಾಮೀಣ ವಿದ್ಯುದೀಕರಣ ಯೋಜನೆಗಾಗಿ ನೀಡಲಾಗುವ ಸಹಾಯ ಧನದ

ಪಾವತಿಗಾಗಿ 1,250 ಕೋಟಿ ರೂ.ಗಳನ್ನು ಕೇಳಿದ್ದೇವೆ. ಮತ್ತೊಂದು ಸಂಚಿತ ಋಣ ಪರಿಹಾರ ನಿಧಿಗೆ ಮಾರುಕಟ್ಟೆ ಸಾಲದ ಭವಿಷ್ಯದ ಹೊಣೆಗಾರಿಕೆಗಳನ್ನು ನೋಡಿಕೊಳ್ಳುವ ಸಲುವಾಗಿ Reserve Bank of India guidelines ಪ್ರಕಾರ ಋಣ ಪರಿಹಾರ ನಿಧಿಗೆ ಕೊಡುಗೆಯನ್ನು ನಾವು ಕೊಡಬೇಕಾಗಿರುತ್ತದೆ. ಅದಕ್ಕಾಗಿ 1,000 ಕೋಟಿ ರೂ. ಗಳನ್ನು ಪೂರಕ ಅಂದಾಜಿನಲ್ಲಿ ಕೇಳಿದ್ದೇವೆ. NREG ಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ 720 ಕೋಟಿ ರೂ.ಗಳನ್ನು ಕೊಡುತ್ತದೆ. ಅದರ ಜೊತೆಗೆ ನಮ್ಮ ರಾಜ್ಯ ಸರ್ಕಾರದ ಹಣ 80 ಕೋಟಿ ಒಟ್ಟು 800 ಕೋಟಿ ರೂ.ಗಳಿಗೆ ಪೂರಕ ಅಂದಾಜಿನಲ್ಲಿ ಒಪ್ಪಿಗೆಯನ್ನು ಕೇಳಿದ್ದೇವೆ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಕಟ್ಟಡ ಮತ್ತು ರಸ್ತೆ ದುರಸ್ತಿ ಮತ್ತು ನಿರ್ವಹಣೆಗಾಗಿ 610 ಕೋಟಿ ರೂ.ಗಳನ್ನು ಕೇಳುತ್ತಿದ್ದೇವೆ. ಇವತ್ತು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಆಶ್ರಯ ಮನೆಗಳನ್ನು sanction ಮಾಡಿದ್ದರಿಂದ ಆಶ್ರಯ ಯೋಜನೆಗಾಗಿ ತಕ್ಷಣ ಅವಶ್ಯಕತೆ ಬಂದಿದ್ದರಿಂದ ನಾವು 400 ಕೋಟಿ ರೂ.ಗಳನ್ನು ಕೇಳುತ್ತಿದ್ದೇವೆ. ಅದೇ ರೀತಿ NDRF ಮತ್ತು SDRF ರಾಷ್ಟ್ರೀಯ ಅನಾಹುತ ಮತ್ತು ನಿಧಿ ಮೂಲಕ ಪರಿಹಾರ ಕಾಮಗಾರಿ ಸಲುವಾಗಿ ಕೇಂದ್ರ ಸರ್ಕಾರದಿಂದ ಹಣ ಬರುವ ಜೊತೆಗೆ ನಮ್ಮ ಸರ್ಕಾರದಿಂದ matching grant ಆಗುವ ರೀತಿಯಲ್ಲಿ 250 ಕೋಟಿ ರೂ.ಗಳನ್ನು ಕೇಳುತ್ತಿದ್ದೇವೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ವಿವಿಧ ಉಪವೇಶಗಳಿಗಾಗಿ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು ಒದಗಿಸುವುದಕ್ಕೆ 188 ಕೋಟಿ ರೂ.ಗಳನ್ನು ಕೇಳಿದ್ದೇವೆ. ಮತ್ತೊಂದು rural roads development ಸಲುವಾಗಿ 128 ಕೋಟಿ ರೂ.ಗಳನ್ನು ಕೇಳಿದ್ದೇವೆ. ಇದರ ಜೊತೆಗೆ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನಕ್ಕಾಗಿ, ಹಿಂದೆ ಈ ಯೋಜನೆಗಳನ್ನು ತೆಗೆದುಕೊಂಡಿದ್ದು, ಅದಕ್ಕೆ ಕೆಲವೊಂದು payment ಆಗಬೇಕಾಗಿರುವ ಉದ್ದೇಶದಿಂದ 100 ಕೋಟಿ ರೂ.ಗಳನ್ನು ಪೂರಕ ಅಂದಾಜಿನಲ್ಲಿ ಕೇಳಿದ್ದೇವೆ. ಅದೇ ರೀತಿ ಕುಡಿಯುವ ನೀರಿನ ಸಲುವಾಗಿ 62 ಕೋಟಿ ರೂ.ಗಳನ್ನು ಕೇಳಿದ್ದೇವೆ. ಪೂರಕ ಅಂದಾಜಿನಲ್ಲಿ

ನಾವು ಕೇಳಿರುವ ಒಟ್ಟು 9,197 ಕೋಟಿ ರೂ.ಗಳ ಮೊತ್ತಕ್ಕೆ ಅನುಮತಿಯನ್ನು ಕೋರಿ ಸದನದ ಮುಂದಿಟ್ಟಿದ್ದೇನೆ. ಸಾಲ ಮನ್ನಾ ಇರಬಹುದು, ವಸತಿ ಇಲಾಖೆಗೆ ಸಂಬಂಧಪಟ್ಟಿದ್ದಿರಬಹುದು, NREG ಗೆ ಸಂಬಂಧಪಟ್ಟಿರಬಹುದು ಇದೆಲ್ಲಾ ಬಹಳ ಮುಖ್ಯವಾಗಿ ಅವಶ್ಯಕತೆಯಿರುವಂತಹದ್ದು, ಆ ದೃಷ್ಟಿಕೋನ ದಿಂದ ಈ ಪೂರಕ ಅಂದಾಜಿಗೆ ಅನುಮತಿಯನ್ನು ಕೊಡ ಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಎಲ್ಲಾ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದು ಬಹಳ ಅವಶ್ಯಕವಾಗಿದ್ದು, ಇದನ್ನು ಉಪಯೋಗ ಮಾಡಬೇಕಾಗಿದೆ. ಆದ್ದರಿಂದ ಈ ಪೂರಕ ಅಂದಾಜುಗಳನ್ನು ಮಂಡನೆ ಮಾಡಿದ್ದೇನೆ ತಾವುಗಳು ಒಪ್ಪಿಗೆಯನ್ನು ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಈ ಪೂರಕ ಅಂದಾಜುಗಳ ಎರಡನೇ ಕಂತನ್ನು ಮಂಡಿಸಿದ್ದಾರೆ ಮತ್ತು ಅವರು ವಿವರಣೆ ಕೊಡುವಾಗ ಎರಡನೇ ಕಂತಿನಲ್ಲಿ ಕೂಡ 9 ಸಾವಿರದ 197 ಕೋಟಿ 65 ಲಕ್ಷ 24 ಸಾವಿರ ರೂ.ಗಳು ಇಷ್ಟು ಹಣಕ್ಕೆ ಅನುಮತಿ ಕೇಳಿದ್ದಾರೆ. ಮತ್ತು ಇದು ಎರಡನೇ ಕಂತು ಮೊದಲನೇ ಕಂತಿನಲ್ಲಿ ಕೂಡ ಸಾವಿರಾರು ಕೋಟಿ ರೂ.ಗಳನ್ನು ಕೇಳಿದ್ದಾರೆ. ಬಜೆಟ್ ಇರುವುದು ಒಂದು ಲಕ್ಷದ ಎರಡು ಸಾವಿರ ಕೋಟಿ ರೂ.ಗಳಿಗೆ. ಅಷ್ಟು ಹಣವನ್ನು ಖರ್ಚು ಮಾಡಬೇಕಾದರೆ ಇವರು 2,6500,000 ಕೋಟಿ ರೂ.ಗಳ ಸಾಲ ತೆಗೆದು ಕೊಳ್ಳಬೇಕು. ಈಗ ಕೇಳಿರುವ ಮೊತ್ತವನ್ನು ಹೇಗೆ ತುಂಬಿಕೊಳ್ಳುತ್ತಾರೆಂಬ ಬಗ್ಗೆ explain ಮಾಡಬೇಕೋ, ಬೇಡವೋ? ಇದು ಮಾಮೂಲಿಯಾಗಿ ಬರೆಯುವ ಒಂದು sentence. Supplemenatry Estimates ನಲ್ಲಿ ಮಾಮೂಲಿಯಾಗಿ ಉಳಿತಾಯದಲ್ಲಿ ಅಧಿಕ ತೆರಿಗೆ ಸಂಗ್ರಹ. ಇವರು ಬಂದ ನಂತರ ಇವತ್ತಿನವರೆಗೆ ಯಾವುದಾದರೂ ಕೂಡ taxes ಉಳಿತಾಯ ಮಾಡಿರುವುದಾಗಲಿ, ಖರ್ಚನ್ನು ಉಳಿತಾಯ ಮಾಡಿರುವುದಾಗಲಿ ಇದೆಯೇ?

ಹಣ ಖರ್ಚು ಮಾಡದೆ ಉಳಿತಾಯವಾಗಿದೆ. Unspent money ಇದೆ. Additional ಆಗಿ ಇವರು resources ಅನ್ನು ಹೆಚ್ಚು mobilize ಮಾಡಿಕೊಂಡು meet ಮಾಡಿರುವಂತಹದ್ದು ಇಲ್ಲವೇ ಇಲ್ಲ. ಖರ್ಚು ಮಾಡುವುದಕ್ಕೆ ಇಷ್ಟು ಕೋಟಿ ರೂ.ಗಳನ್ನು ಕೇಳಿದ್ದಾರಲ್ಲಾ, ಇದನ್ನು ಹೇಗೆ ತುಂಬಿಕೊಳ್ಳುತ್ತಾರೆ?

ಈಗಾಗಲೇ ನಿಗಧಿಯಾಗಿರುವಂತಹ ಕಾರ್ಯಕ್ರಮಗಳಿಗೆ ಏನು ಮಾಡುತ್ತಾರೆ? Supplemenatry Estimates ನಲ್ಲಿ, ಈಗಾಗಲೇ ಬಜೆಟ್‌ನಲ್ಲಿ, Annual Financial Statement ನಲ್ಲಿ ಏನು ಅಲೋಕೇಟ್ ಮಾಡಿದ್ದಾರೆ ಅದು ಸಾಲಲ್ಲ ಎಂದು ಹೇಳಿ ಅದಕ್ಕೋಸ್ಕರ ನಮಗೆ ಅಡಿಷನಲ್ ಆಗಿ ದುಡ್ಡು ಬೇಕೆಂದು ಕೇಳಿರುವುದು Article 205 clause 1 ರಲ್ಲಿ, Constitution ನಲ್ಲಿ ಪ್ರೊವೈಡ್ ಮಾಡಿದ್ದಾರೆ. ನಾವು ಪ್ರತಿ ವರ್ಷ ಬಜೆಟ್ ಮಂಡಿಸುವಾಗ Statement of Income and Expenditure ಅನ್ನು ಮಾಡುತ್ತೇವೆ. ಹಾಗೇ ಮಾಡುವ ಸಂದರ್ಭದಲ್ಲಿ Annual Financial Statement ಒಂದನ್ನು ಅಸೆಂಬ್ಲಿ ಮುಂದೆ ಇಡುತ್ತೇವೆ. ಪ್ರತಿವರ್ಷವೂ ಇದನ್ನು ಇಡಲೇಬೇಕು. It is mandatory ಅದರಲ್ಲಿ ಹೇಳಿರುವ grants ಮತ್ತು Expenditure ಗಳನ್ನು ಬಿಟ್ಟು ಇವು ಅಡಿಷನಲ್ ಆಗಿ ಆಗುವಂತ ಹದ್ದು. ಇದಕ್ಕೆ ಹೇಗೆ ಇವರು ದುಡ್ಡನ್ನು ಒದಗಿಸಿಕೊಳ್ಳುತ್ತಾರೆ? ಈ ಒಂದು ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳು explain ಮಾಡಬೇಕು. ಸಾಮಾನ್ಯ ಬೆಳವಣಿಗೆಯಿಂದ ಮತ್ತು ಇತರ ಯೋಜನೆಗಳಿಗೆ ಒದಗಿಸಬಹುದಾದ ಮೊತ್ತದಲ್ಲಿ ಆಗಬಹುದಾದ ಉಳಿತಾಯದಿಂದ ಭರಿಸಲು ನಿರೀಕ್ಷಿಸಲಾಗಿದೆ ಯೆಂದು ಒಂದು sentence ನಲ್ಲಿ ಹೇಳುತ್ತಾರೆ. ಇದನ್ನು ಎಲ್ಲಾ Supplemenatry Estimates ನಲ್ಲಿ ಬರೆಯುತ್ತಾರೆ. ಮೊದಲನೆಯದಾಗಿ, ನಾವು ಹೇಗೆ ಅದನ್ನು ತುಂಬಿಕೊಳ್ಳುತ್ತೇವೆ ಎಂಬುದನ್ನು explain ಮಾಡಬೇಕು. ಎರಡನೆಯದಾಗಿ 1,850 ಕೋಟಿ ರೂ.ಗಳನ್ನು ಬೆಳೆ ಸಾಲ

ಮನ್ನಾ ಮಾಡಿದ್ದೇವೆ, ಅದಕ್ಕಾಗಿ ಅದನ್ನು ಕೋ–ಆಪರೇಟಿವ್ ಸೊಸೈಟಿಗಳಿಗೆ ಕೊಡುವುದರ ಸಲುವಾಗಿ ಬೇಕೆಂದು ಹೇಳಿದ್ದಾರೆ. ಆದರೆ ಅದರಿಂದ ಎಲ್ಲರಿಗೂ ಅನುಕೂಲವಾಗಲಿಲ್ಲ. 25,000 ರೂಪಾಯಿಯವರೆಗೆ ಏನು ಮಾಡಿದರಲ್ಲ ಅದು terranear Crops ಗೆ ಅನುಕೂಲವಾಗಲಿಲ್ಲ. ಅಷ್ಟೇ ಅಲ್ಲದೆ ಇದರಿಂದ ಕಬ್ಬು ಬೆಳೆಯುವವರಿಗೂ ಸಹ ಅನುಕೂಲವಾಗಲಿಲ್ಲ, ಪಿ.ಎಲ್.ಡಿ. ಬ್ಯಾಂಕುಗಳಿಗೂ ಇದರಿಂದ ಅನುಕೂಲವಾಗಲಿಲ್ಲ. ಎಲ್ಲರಿಗೂ ಅನುಕೂಲವಾಗುವಂತೆ ಮಾಡಿ ಎಂದು ಈಗಾಗಲೇ ಹೇಳಿದ್ದೇವೆ. ಆದರೆ ಅವರು ಮಾಡಲೇ ಇಲ್ಲ. ಈಗ 1850 ಕೋಟಿ ರೂ.ಗಳು ಕೊಡಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೇ ನಾನು ಈಗ ಹೇಳುವ ಅಂಶ ಅವತ್ತು ಪ್ರಸ್ತಾಪ ಮಾಡಿದ್ದೇನೆ, ಇವತ್ತೂ ಸಹ ಕೇಳುತ್ತಿದ್ದೇನೆ. ನೀವು ನಾವು ಹೇಳುವುದನ್ನು ಕೇಳಿಸಿ ಕೊಳ್ಳುತ್ತಿದ್ದೀರಾ ಅಥವಾ ಓದುತ್ತಿದ್ದೀರಾ? ಬಹಳ ಸೀರಿಯಸ್ ಆಗಿ ಓದುತ್ತಿದ್ದೀರಲ್ಲಾ, ಎರಡೂ ಆಗುತ್ತಿದೆಯೇ?

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ಮುಖ್ಯಮಂತ್ರಿಗಳು ಓದಿಕೊಂಡು ಕೇಳಿಸಿಕೊಳ್ಳುತ್ತಿದ್ದಾರೆ, ಕೇಳಿಸಿಕೊಂಡು ಓದುತ್ತಿದ್ದಾರೆ.

ಅಧ್ಯಕ್ಷರು : ತಾವು ಹೇಗೆ ಬೇಕಾದರೂ ಅರ್ಥಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾನು ಏಕೆ ಹೇಳುತ್ತಿದ್ದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸ್ಪಷ್ಟಪಡಿಸಬೇಕು. ಒಂದು ಲಕ್ಷ ರೂ.ಗಳವರೆಗೆ 0% Interest ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಯಾವುದೇ ಜಿಲ್ಲಾ ಬ್ಯಾಂಕುಗಳಿಗೆ ದುಡ್ಡನ್ನು ಬಿಡುಗಡೆ ಮಾಡಿಲ್ಲ. ಅದು ಇದರಲ್ಲಿ ಸೇರಿದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕು. ರೂ.1850 ಕೋಟಿಯಲ್ಲಿ ಬೆಳೆಸಾಲ ಮನ್ನಾ ಮಾಡುವುದು ಸೇರಿದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕು. ಒಂದು ವೇಳೆ ಸೇರದೇ ಇದ್ದರೆ ಅದನ್ನು ಸೇರಿಸಬೇಕು. ಇಲ್ಲದೆ ಹೋದರೆ ಡಿ.ಸಿ.ಸಿ. ಬ್ಯಾಂಕುಗಳು ಸಾಲ ಕೊಟ್ಟಿದ್ದು, ಒಂದು ವೇಳೆ ಕೊಡದೇ ಹೋದರೆ ಆ ಬ್ಯಾಂಕುಗಳು 12 ರಿಂದ 13% ಬಡ್ಡಿ ವಸೂಲು ಮಾಡುತ್ತಾರೆ. ಒಂದು ವೇಳೆ 0% Interest Subsidy

ಕೊಡದೇ ಹೋದರೆ ತೊಂದರೆಯಾಗುತ್ತದೆ. ಪತ್ರಕರ್ತರಿಗೆ ಏನೋ ಕೊಡುತ್ತಿದ್ದೀರಲ್ಲಾ ಅದನ್ನು ಬೇಗ ಕೊಡಿ. ಗಲಾಟೆ ಆಗುತ್ತಿದೆ.

ಅಧ್ಯಕ್ಷರು : ಅದು ಸಿ.ಎ.ಜಿ. Report.

ಶ್ರೀ ಸಿದ್ದರಾಮಯ್ಯ : ಸಿ.ಎ.ಜಿ. report ಅನ್ನು ಬಹಳ ಆಸಕ್ತಿಯಿಂದ ತೆಗೆದುಕೊಳ್ಳುತ್ತಿದ್ದಾರೆ. ಕೊನೇ ದಿನ ಮಂಡಿಸಿರುವುದರಿಂದ ಅದನ್ನು ಇನ್ನು ನಾವೇ ನೋಡಿಲ್ಲ. ಮೊದಲೇ ಮಂಡಿಸಬೇಕಿತ್ತು. ಏಕೆಂದರೆ ಚರ್ಚೆಯಾಗಬೇಕಲ್ಲವೇ? ಚರ್ಚೆಯಾಗಬೇಕೆನ್ನುವ ಉದ್ದೇಶದಿಂದ ನಾಳೆ ಒಂದು ದಿನ, ನಾಳಿದ್ದು ಒಂದು ದಿನ ಅಧಿವೇಶನ ಮಾಡೋಣ. 14ನೇ ತಾರೀಖಿಗೆ ಒಂದು ದಿವಸ ಚರ್ಚೆ ಮಾಡೋಣ, ಮಾನ್ಯ ಅಧ್ಯಕ್ಷರೆ. ಏಕೆಂದರೆ ಇವರು ಈಗ ಮಂಡಿಸಿದ್ದಾರೆ, ಅದನ್ನು ನಾವು ನೋಡಿಕೊಂಡು ಬರಬೇಕಲ್ಲವೇ? ನಂತರ ಚರ್ಚೆಮಾಡಬೇಕು. ಆದಕಾರಣ ಬೆಳೆ ಸಾಲ ಮನ್ನಾ ಮಾಡಿದ ವಿಷಯವನ್ನು ಸ್ಪಷ್ಟಪಡಿಸಬೇಕು. ಇಲ್ಲದೆ ಹೋದರೆ ಆ ಬ್ಯಾಂಕುಗಳವರು ರೈತರಿಂದ 12–13% ಬಡ್ಡಿಯನ್ನು ವಸೂಲು ಮಾಡುತ್ತಾರೆ. ನೇಕಾರರಿಗೆ, ಮೀನುಗಾರರಿಗೆ 3% ಬಡ್ಡಿ ದರದಲ್ಲಿ ಸಾಲ ಕೊಡುತ್ತೇವೆಂದು ಹೇಳಿದ್ದರು. ಅದು ಕೂಡ ಈ ಸಬ್ಸಿಡಿಯಲ್ಲಿ ಸೇರಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅವರಿಗೆ 3% ನಲ್ಲಿ ಕೊಡುತ್ತೇವೆಂದು ಸಬ್ಸಿಡಿ ಕೊಡದೇ ಹೋದರೆ ಅವರಿಗೆ ಸಾಲವನ್ನೇ ಯಾರು ಕೊಡುವುದಿಲ್ಲ. ಒಂದು ವೇಳೆ ಸಾಲವನ್ನು ತೆಗೆದುಕೊಂಡಿದ್ದರೆ ಬಡ್ಡಿಯನ್ನು ವಸೂಲು ಮಾಡುತ್ತಾರೆ. ಇದನ್ನು ಒಂದು ಸೇರಿಸಬೇಕು. Rural Developement ಗೆ ಸುಮಾರು 892 ಕೋಟಿ ರೂ.ಗಳಿಂದ 1,000 ಕೋಟಿ ರೂ.ಗಳವರೆಗೆ ಅಡಿಷನಲ್ ಆಗಿ ಹಣ ಕೇಳಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರದಿಂದ NREGS ಗೆ ಬಂದಿರುವ 800 ಕೋಟಿ ರೂ.ಗಳನ್ನು ಇದರಲ್ಲಿ ತೋರಿಸಿದ್ದಾರೆ. ಅದೂ ಕೂಡ ಇಲ್ಲಿ vote ಆಗಬೇಕಾಗುತ್ತದೆ. ನಿನ್ನೆ ತಾನೇ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. 2009–10ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. 2009–10 ರಲ್ಲಿ

ಸುಮಾರು 600 ಕೋಟಿ ರೂ.ಗಳು ಅವ್ಯವಹಾರವಾಗಿದೆಯೆಂದು ಹೇಳಿ ಅನೇಕ ಕಡೆಗಳಲ್ಲಿ enquiry ನಡೆಯುತ್ತಿತ್ತು. ಇದನ್ನು ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಜೈರಾಮ್ ರಮೇಶ್ ಅವರು ಸಹ ಹೇಳಿದ್ದು, ಅದನ್ನು ಇವರು ಸಹ ಒಪ್ಪಿಕೊಂಡಿದ್ದಾರೆ. Enquiry ಗಳು ನಡೆಯುತ್ತಾ ಇವೆ. ಇಲ್ಲಿ ಸಮಸ್ಯೆ ಬಂದಿರುವುದು ಏನೆಂದರೆ, ನಿನ್ನೆ ಚಳ್ಳಕೆರೆಯಲ್ಲಿ ನಡೆದಂತಹ ಘಟನೆಯನ್ನು ಪ್ರಸ್ತಾಪ ಮಾಡಿದ್ದೇವೆ. ಅನೇಕ ಕ್ಷೇತ್ರಗಳಲ್ಲಿ ಈ ರೀತಿಯಾಗಿದೆ. ಕೆಲಸಕ್ಕಾಗಿ ಕೂಲಿ ಮಾಡಿಬಿಟ್ಟಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ಕೂಲಿ ಮಾಡದೇ ದುಡ್ಡು ತೆಗೆದುಕೊಂಡಿದ್ದಾರೆ. That is different. ಆದರೆ ಕೆಲವು ಕಡೆ ಕಳೆದ ಮೂರು ವರ್ಷಗಳಿಂದ ಕೆಲಸ ಮಾಡಿದ್ದು, ಅವರಿಗೆ ಇದುವರೆಗೂ ಕೂಲಿ ಕೊಟ್ಟಿಲ್ಲ. ಕೂಲಿ ಮಾಡಿರುವವರು ಎಲ್ಲಿಗೆ ಹೋಗಬೇಕು? ಕೂಲಿ ಕೊಡುವುದಕ್ಕಾಗಿಯೇ ಈ ಕಾರ್ಯಕ್ರಮವನ್ನು ತಂದಿರುವುದು. ಯಾರಿಗೋಸ್ಕರ ಕೇಂದ್ರ ಸರ್ಕಾರ ಈ ಕಾರ್ಯಕ್ರಮವನ್ನು ತಂದಿದ್ದಾರೋ ಅವರುಗಳಿಗೆ ಕಳೆದ ಮೂರು ವರ್ಷದಿಂದ ಕೂಲಿ ಕೊಟ್ಟಿಲ್ಲ. ಇದಕ್ಕೆ ಯಾವ್ಯಾವ ಅಧಿಕಾರಿಗಳ ಜವಾಬ್ದಾರಿಯಾಗಿದ್ದಾರೆ, implement ಮಾಡುವಾಗ ಏನು ಅವ್ಯವಹಾರಗಳು ನಡೆದಿವೆ, ಭ್ರಷ್ಟಾಚಾರ ನಡೆದಿದೆ, ಕಾನೂನು ವಿರುದ್ಧವಾಗಿ ಏನಾದರೂ ನಡೆದಿದೆಯೇ, ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದ್ದಾರೆ ಎನ್ನುವುದನ್ನು ತನಿಖೆ ಮಾಡಲಿ, ಯಾರ್ಯಾರ ಮೇಲೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದೆಲ್ಲವನ್ನು ತೆಗೆದುಕೊಳ್ಳಲಿ. ಆದರೆ ಯಾರು ಕೂಲಿ ಮಾಡಿದ್ದಾರೋ ಅವರಿಗೆ ಕೂಲಿ ಸಿಗಬೇಕಲ್ಲವೇ? They are entitled ಕೂಲಿ ಮಾಡಿದವರಿಗೆ ಕೆಲವು ಕಡೆ ರೂ. 100, ಕೆಲವು ಕಡೆ 125 ಇರುವುದು 155 ಆಗಿದೆ ಅದನ್ನು ಮೊದಲು ನೀವು ಕೊಡಬೇಕು. ಅದನ್ನು ನೀವಿಟ್ಟುಕೊಂಡು ಕೂಲಿ ಕೊಡದೇ ಹೋದರೆ ಆ ಬಡ ಕೂಲಿ ಕಾರ್ಮಿಕರು ಎಲ್ಲಿಗೆ ಹೋಗಬೇಕು? ಜೊತೆಗೆ ಬರಗಾಲ ಬೇರೆ. ಬರಗಾಲ ಇರುವಾಗ ಕೂಲಿ ಕಾರ್ಮಿಕರಿಗೆ ಕೂಲಿ ಕೊಡದೇ ಹೋದರೆ ಅವರೆಲ್ಲರೂ ಊರು ಬಿಟ್ಟು ಕೆಲಸ ಹುಡುಕಿಕೊಂಡು ಗುಳೆ ಹೋಗಿ ಬಿಡುತ್ತಾರೆ. ಆದ್ದರಿಂದ

ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ ವಿಚಾರಣೆ ಮಾಡುವುದು ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿ. ಯಾವ ರೀತಿ ಬೇಕಾದರೂ ಶಿಕ್ಷೆಯನ್ನು ಕೊಡಿ. ಆದರೆ ಕೂಲಿ ಮಾಡಿರುವ ಜನರಿಗೆ ಕೂಡಲೇ ಕೂಲಿ ಒದಗಿಸುವಂತಹ ಕೆಲಸವನ್ನು ಮಾಡಬೇಕು. ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿ 800 ಕೋಟಿ ರೂ.ಗಳು ಬಂದಿರುವುದರಿಂದ ನೀವು ಕೂಡಲೇ ಇದನ್ನು ಮಾಡಬೇಕು. ನಾವು ಕೇಂದ್ರ ಸರ್ಕಾರಕ್ಕೆ ಬರೆಯುತ್ತೇವೆ, ನಂತರ ಅಲ್ಲಿಂದ ಬಂದ ಮೇಲೆ ನಾವು ಮಾಡುತ್ತೇವೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಹೇಳಿದರು. That is not the reply. It won't serve the purpose. ಮೊದಲು ಕೂಲಿ ಕೊಟ್ಟು, ನಂತರ ತನಿಖೆ ಏನು ಮಾಡಬೇಕೋ ಅದನ್ನು ಮಾಡಿ. ತನಿಖೆಯಾದ ನಂತರ ಯಾರಿಗೆ ಶಿಕ್ಷೆ ಕೊಡಬೇಕೋ ಅವರಿಗೆ ಕೊಡಿ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಈ ಒತ್ತಾಯವನ್ನು ಮಾಡುತ್ತಿದ್ದೇನೆ.

ಎರಡನೆಯದಾಗಿ ಇಂದು ಅನೇಕ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ, ದನಕರುಗಳಿಗೆ ಮೇವಿಲ್ಲ.

ನೀವು ಜಿಲ್ಲಾಧಿಕಾರಿಗಳಿಗೆ, ಸಿ.ಇ.ಓ.ಗಳಿಗೆ ದುಡ್ಡು ಕೊಟ್ಟಿಲ್ಲ. ದುಡ್ಡು ಕೊಡದೇ ಇರುವುದರಿಂದ ಯಾವ ಜಿಲ್ಲಾಧಿಕಾರಿಯನ್ನು ಕೇಳಿದರೂ ಒಂದು ಹೊಸ ಬೋರ್‌ವೆಲ್ ತೋಡಿಸುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಒಂದು ಹೊಸ ಬೋರ್‌ವೆಲ್ ತೋಡುವಂತೆ ಇಲ್ಲ. ಇನ್ನು ಎಲ್ಲಾ ಕಡೆಯೂ ಮಳೆ ಬೀಳಲಿಲ್ಲ. Depression ಆಗದೇ ಹೋಗಿದ್ದರೆ 2–3 ದಿನ ಮಳೆ ಬರದೇ ಹೋಗಿದ್ದರೆ ಹಳ್ಳಿಗಾಡಿನಲ್ಲಿ ಜನರ ಕಷ್ಟ ಹೇಳುವುದಕ್ಕೆ ಆಗುತ್ತಿರಲಿಲ್ಲ. ಅಂಥ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ಅನೇಕ ಕಡೆಗಳಲ್ಲಿ ಈಗಲೂ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಆ ಕಾರಣದಿಂದ ನಾನು ಒತ್ತಾಯ ಮಾಡುತ್ತಿದ್ದೇನೆ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕೂಡಲೇ ಹಣ ಬಿಡುಗಡೆ ಮಾಡಬೇಕು. ಬರಪರಿಹಾರ ಕೆಲಸಗಳನ್ನು ತೆಗೆದುಕೊಳ್ಳಬೇಕು. ಕುಡಿಯುವ ನೀರಿಗೂ ದುಡ್ಡು ಕೊಡಬೇಕು. ದನಕರುಗಳಿಗೆ ಕೂಡ ಮೇವು ಕೊಡಬೇಕು.

ಈಗ ಅಲ್ಲಿ ಒಂದೆರಡು ದಿನ Depression ನಿಂದ ಮಳೆ ಬಂದ ತಕ್ಷಣವೇ ಎಲ್ಲೆಲ್ಲಿ ಗೋ ಶಾಲೆಗಳನ್ನು ತೆರೆದಿದ್ದರೋ ಅವುಗಳನ್ನೆಲ್ಲಾ ಮುಚ್ಚಿ ಬಿಟ್ಟಿದ್ದಾರೆ. ಇದ್ದ ಗೋಶಾಲೆಗಳೇ ಬಹಳ ಕಡಿಮೆ. ಅವುಗಳನ್ನು ಮುಚ್ಚಿದ್ದಾರೆ, ಅವುಗಳಿಗೆ ಕೂಡ ದುಡ್ಡು ಕೊಟ್ಟಿಲ್ಲ. ಯಾವ್ಯಾವುದೋ ಬಾಬತ್ತುಗಳಿಗೆ ಖರ್ಚು ಮಾಡುವುದಕ್ಕೆ ಸದನದಲ್ಲಿ ನಾವು ಪಾಸು ಮಾಡಿ ಕೊಡುತ್ತೇವೆ. ಯಾವುದಕ್ಕೆ ಅಗತ್ಯವಿದೆ ಅದಕ್ಕೆ ಇವರು ದುಡ್ಡು ಕೊಡುತ್ತಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕೂಡಲೇ ಕುಡಿಯುವ ನೀರಿಗೆ ಎಷ್ಟು ದುಡ್ಡು ಬೇಕಾಗುತ್ತದೆ, ದುಡ್ಡನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ಆಶ್ರಯ ಯೋಜನೆಗಳ ಮನೆಗಳಿಗೆ, ಬಸವ ಆಶ್ರಯ ಯೋಜನೆ ಮನೆಗಳಿಗೆ ಪ್ರತಿಯೊಂದು ಕ್ಷೇತ್ರಕ್ಕೆ ಸಿಕ್ಕಾಪಟ್ಟೆ ಮನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ಕ್ಷೇತ್ರಕ್ಕೆ 10 ಸಾವಿರ, 12 ಸಾವಿರ ಮನೆಗಳನ್ನು ಕೊಟ್ಟಿದ್ದಾರೆ. ಹೆಚ್ಚುವರಿಯಾಗಿ ರೂ. 400 ಕೋಟಿಗಳನ್ನು ಇಟ್ಟರೆ ಈ ವರ್ಷಕ್ಕೆ ಅದು ಸಾಕಾಗುವುದಿಲ್ಲ. ಆಶ್ರಯ ಮನೆಗಳಿಗೆ ಕೂಡ ಇವತ್ತು ಮನೆಗಳನ್ನು ಪೂರ್ತಿ....

ಶ್ರೀ ಸಿದ್ದರಾಮಯ್ಯ : ಅದೇ ವಿಷಯಕ್ಕೆ ಈಗ ಬರುತ್ತಿದ್ದೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ನಾನೂ ಹೇಳುತ್ತೇನೆ, ತಮ್ಮ ಮಾತಿಗೆ ಹೆಚ್ಚು ಬೆಲೆ ಇರುವುದರಿಂದ...

ಶ್ರೀ ಪಿ.ಎಂ. ಅಶೋಕ್ : ಕೊಪ್ಪಳ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ರೂ.12 ಕೋಟಿ ಬಾಕಿಯಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳೆ, this is a very serious matter. ಎರಡು ವರ್ಷದಿಂದ ನಮಗೆ ಬರಗಾಲ ಪರಿಸ್ಥಿತಿಯಿರುವುದರಿಂದ ಈಗ ಕೊಪ್ಪಳ ಜಿಲ್ಲೆಯಲ್ಲಿ ಒಂದೇ ಕ್ಷೇತ್ರದಲ್ಲಿ ರೂ.12 ಕೋಟಿ ಕೊಡುವುದು ಬಾಕಿ ಇದೆ. ನಮ್ಮ ಹಾಗೂ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಬಾಕಿಯಿದೆ. ನನ್ನ ಕ್ಷೇತ್ರದಲ್ಲಿ ಕೊಳವೆಬಾವಿಗಳನ್ನು ತೋಡಿಸಿರುವುದಕ್ಕೆ

ರೂ.20 ಲಕ್ಷ ಕೊಡಬೇಕಾಗಿದೆ. ಅವರನ್ನು ಕೇಳಿದರೆ Task Force ನಲ್ಲಿ ತೋರಿಸಿ ತೋಡಿಸಿಕೊಟ್ಟಿದ್ದಾರೆ. ಈಗ ಅವರು ಬರೆದರೆ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಈಗ ಏನು ಮಾಡಬೇಕು? ಎಲ್ಲಿ ಬತ್ತಿ ಹೋಗಿದೆಯೋ ಅಲ್ಲಿ ನೀರು ಕೊಡಬೇಕೋ ಬೇಡವೋ? ಜನರಿಗೆ ಕೊಳವೆ ಬಾವಿಗಳನ್ನು ತೋಡಿಸಬೇಕೋ, ಬೇಡವೋ? ಇದು ಈಗ ಪ್ರಶ್ನೆಯಿರುವುದು, ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒತ್ತಾಯ ಮಾಡುತ್ತೇನೆ. ಈ Supplementary Estimateನಲ್ಲಿ ನೀವೇನು ಹಣ ಕೇಳುತ್ತಿದ್ದಾರೆ, ಆ ಹಣದಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಹಣ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬೇಕು. ಮೇವಿಗೆ ಮತ್ತು ಕುಡಿಯುವ ನೀರಿಗೆ ಹಣ ಕೊಡಬೇಕು.

ಶ್ರೀ ಪಿ.ಎಂ. ಅಶೋಕ್ : ಬರಗಾಲವಿರುವುದರಿಂದ ಎಲ್ಲಾ ಕಡೆ ಬೋರ್‌ವೆಲ್‌ಗಳು ಬತ್ತಿ ಹೋಗಿವೆ. ಎಂ.ಎಲ್.ಎ. ಗ್ರ್ಯಾಂಟ್ ರೂ.50 ಲಕ್ಷ ಬಿಡುಗಡೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ : 143 ತಾಲ್ಲೂಕುಗಳನ್ನು ಬರ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೀರಿ. ಆ 143 ತಾಲ್ಲೂಕುಗಳಿಗೆ ರೂ. 1 ಕೋಟಿ ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. Additional ಆಗಿ ಮನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ದುಡ್ಡನ್ನು ಕೊಟ್ಟಿಲ್ಲ. ಇದರಲ್ಲಿ ಮನೆಗಳಿಗೆ ಕೊಡುವುದಕ್ಕೋಸ್ಕರ ರೂ. 400 ಕೋಟಿಗಳನ್ನು ಕೇಳಿದ್ದಾರೆ. ನೀವು ಎಲ್ಲೆಲ್ಲಿ ದುಡ್ಡ ಕೊಟ್ಟಿಲ್ಲ ಅಷ್ಟು ಕಟ್ಟಿಲ್ಲ, ಏಕೆಂದರೆ ಎಷ್ಟು ಕಟ್ಟಿರುತ್ತಾರೋ ಅಷ್ಟಕ್ಕೆ ದುಡ್ಡು ಕೊಡುತ್ತಾರೆ. 4 ಕಂತುಗಳಲ್ಲಿ ಕೊಡುತ್ತಾರೆ. ಕೆಲವರು ಅಡಿಪಾಯ ಹಾಕಿಕೊಂಡಿದ್ದಾರೆ, ಕೆಲವರು Lintel Levelಗೆ ಬಂದಿರುತ್ತಾರೆ. ದುಡ್ಡಿಲ್ಲದೆ ಕೆಲವರು ಹಾಗೇ ನಿಲ್ಲಿಸಿದ್ದಾರೆ. ಈ ಎಲ್ಲಾ ಪರಿಸ್ಥಿತಿಗಳಿವೆ. ಅದಕ್ಕೋಸ್ಕರ ಮನೆಗಳಿಗೆ ಕೂಡಲೇ ಎಷ್ಟು ಕೊಡಬೇಕೋ ಅಷ್ಟು ದುಡ್ಡನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಕುಡಿಯುವ ನೀರು, ಮನೆಗಳಿಗೆ, ದನಕರುಗಳಿಗೆ ಮೇವು ಮತ್ತು ಗೋಶಾಲೆಗಳಿಗೆ ದುಡ್ಡನ್ನು ಬಿಡುಗಡೆ ಮಾಡಬೇಕು.

ನಾಲ್ಕನೆಯದಾಗಿ, ನಾನು ಮುಖ್ಯಮಂತ್ರಿಗಳಿಗೆ BACಯಲ್ಲಿ ಹೇಳಿದ್ದೇನೆ, ಶಾಸಕರ ಅನುದಾನದಡಿ ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿದ್ದೀರಿ. ಆದರೆ ದುಡ್ಡು ಬಿಡುಗಡೆ ಮಾಡಿಲ್ಲ.

ಶ್ರೀ ಪಿ.ಎಂ. ಅಶೋಕ್ : ರೂ.74 ಲಕ್ಷಗಳಿಗೆ ಕ್ರಿಯಾ ಯೋಜನೆ, ಜಿಲ್ಲಾಧಿಕಾರಿಗಳಿಂದ ಒಂದು ಆದೇಶ ಬಂದಿದೆ. ಹಣವನ್ನು ದಯವಿಟ್ಟು ಬಿಡುಗಡೆ ಮಾಡಬೇಕು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ಬರೇ ಕ್ರಿಯಾ ಯೋಜನೆ, Sanction ಆಗಿಲ್ಲವೆಂದರೆ ಜನ ನಮ್ಮನ್ನು ಹಿಡಿದುಕೊಳ್ಳುತ್ತಾರೆ.

ಶ್ರೀ ಸಿದ್ದರಾಮಯ್ಯ : ಹಣ ಕೊಟ್ಟಿಲ್ಲ, ಹಣ ಕೊಡದೇ ಅವರ್‍ಯಾರೂ ಕೆಲಸವನ್ನು ಕೈಗೆತ್ತಿಕೊಳ್ಳುವುದಿಲ್ಲ. ನಾವು ಲ್ಯಾಂಡ್ ಆರ್ಮಿಗೆ ಅಥವಾ ನಿರ್ಮಿತಿ ಕೇಂದ್ರಕ್ಕೆ ವಹಿಸಬೇಕಾಗುತ್ತದೆ. ಜಿಲ್ಲಾ ಪಂಚಾಯಿತಿಗೆ ಕೊಡಬೇಕಾಗುತ್ತದೆ. ಇವೆಲ್ಲಾ ಕೊಡಬೇಕಾದರೆ ಹಣ ಕೊಡದೆ ಜಿಲ್ಲಾ ಪಂಚಾಯಿತಿಯವರು ಟೆಂಡರ್ ಕರೆಯುವುದಿಲ್ಲ. ಇದನ್ನು ಮಾಡಬೇಕಾದರೆ ಕೂಡಲೇ ಜಿಲ್ಲಾಧಿಕಾರಿಗಳಿಗೆ ಉಳಿದಿರುವ ಪ್ರತಿಯೊಬ್ಬ ಎಂ.ಎಲ್.ಎ.ಗಳಿಗೆ ಕೂಡ ಈಗ ಕೊಟ್ಟಿರುವ ರೂ.24 ಲಕ್ಷಗಳ ಜೊತೆಗೆ ಉಳಿದ ರೂ.76 ಲಕ್ಷಗಳನ್ನು ಒಟ್ಟಾಗಿ ಬಿಡುಗಡೆ ಮಾಡಿ ಶ್ರೀ ಜಗದೀಶ್ ಶೆಟ್ಟರ್ ಅವರೆ, ಚುನಾವಣೆ ಯಾವಾಗ ಬರುತ್ತದೋ ಹೇಳುವುದಕ್ಕಾಗುವುದಿಲ್ಲ. ನೀವು ಇರುವಾಗಲೇ ಎಂ.ಎಲ್.ಎ. ಗಳಿಂದ ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಬರಲಿ. ದಯವಿಟ್ಟು ಬಿಡುಗಡೆ ಮಾಡಿ. ಬಿಡುಗಡೆ ಮಾಡುತ್ತೀರ ಅಲ್ಲವೇ? ನೀವು ನಗುವುದೇ ಇಲ್ಲವಲ್ಲ? ಉತ್ತರ ಕೊಡುವಾಗ ಹೇಳುತ್ತೀರಾ?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು) : ನಾನು ನಿಮ್ಮ ಪಾಯಿಂಟ್ ಪಾಯಿಂಟ್‌ಗೂ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ಈಗ ಹೇಳಿ ಎಂದರೆ ಹೇಳುತ್ತೇನೆ. ನಂತರ ಸಭಾಧ್ಯಕ್ಷರು ಕುಳಿತುಕೊಳ್ಳಿ ಎಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ನೀವು ಬರೆದುಕೊಂಡು ಹೇಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನನಗೆ ಎಲ್ಲಾ ಜ್ಞಾಪಕವಿದೆ.

ಶ್ರೀ ಸಿದ್ದರಾಮಯ್ಯ : ತಲೆಯಲ್ಲಿ ಎಲ್ಲಾ ಜ್ಞಾಪಕವಿರುತ್ತದೆಯೇ? ಇಲ್ಲಿಯವರೆವಿಗೂ ನಿಮ್ಮ ಬಗ್ಗೆ ಎಲ್ಲರಿಗೂ ಒಳ್ಳೆಯ ಅಭಿಪ್ರಾಯವಿದೆ. ನೀವು ಕೊಡದೆ ಹೋದರೆ ನಿಮ್ಮ ಬಗ್ಗೆ ಕೆಟ್ಟ ಅಭಿಪ್ರಾಯ ಬರುತ್ತದೆ. ತಮಾಷೆಯಲ್ಲ, ಕೆಟ್ಟ ಅಭಿಪ್ರಾಯ ಬರುತ್ತದೆ. ಅದಕ್ಕಾಗಿ ಈ ಸದನದಲ್ಲಿ ನಾನು ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಮೊನ್ನೆ ಈ ಅಧಿವೇಶನದಲ್ಲಿ ಕಬ್ಬಿಗೆ ಬೆಲೆ ನಿಗದಿ ಬಗ್ಗೆ ಮಾತನಾಡುವಾಗ, State Advisory Price ತರುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ನಾಳೆ ಸದನ ಮುಗಿದೇ ಹೋಗುತ್ತದೆ ಆದರೂ ನೀವು ತರಲೇ ಇಲ್ಲ. ಈಗ ತಂದಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಈಗಲೂ ನಾಳೆ ತೆಗೆದುಕೊಂಡು ಬಂದರೆ ನಾವು ಪಾಸು ಮಾಡಿಕೊಡುತ್ತೇವೆ. State Advisory Price ಬೇರೆ ರಾಜ್ಯಗಳಲ್ಲಿ ಯಾವ ರೀತಿ ಇದೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಕಬ್ಬಿನ ಬೆಲೆ ನಿಗದಿ ಮಾಡುವುದಕ್ಕೆ, ಈ ಅಧಿವೇಶನದಲ್ಲಿ SAP Act ತರುತ್ತೇವೆಂದು ಮೊನ್ನೆ ಚರ್ಚೆ ಮಾಡಿದಾಗ ಒಪ್ಪಿಕೊಂಡಿದ್ದೀರಿ. ಈ ಅಧಿವೇಶನದಲ್ಲೇ ತರುತ್ತೇವೆಂದು ನೀವು ಭರವಸೆ ಕೊಟ್ಟಿದ್ದೀರಿ. ಅಧಿವೇಶನ ನಾಳೆ ಮುಗಿಯುತ್ತಿದೆ. ನೀವು ಇನ್ನು ಒಂದು ವಾರ ನಡೆಸುವುದಾರೆ ಬಹಳ ಸಂತೊಷ. ಆದರೆ ಒಂದು

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವೇಳೆ ನಾಳೆಯೇ ಅಧಿವೇಶನ ಮುಗಿಸುವುದಾದರೆ, ಆ ಭರವಸೆಗನುಗುಣವಾಗಿ ಇವತ್ತೇ ಅದನ್ನು ತಯಾರು ಮಾಡಿಸಿ ತೆಗೆದುಕೊಂಡು ಬಂದರೆ ಒಳ್ಳೆಯದು ಅಥವಾ ordinance ಹೊರಡಿಸುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇದನ್ನು ಕೂಡ ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಕರೆಂಟ್ ಇಲ್ಲ, ಪಾಪ ಕು.ಶೋಭಾ ಕರಂದ್ಲಾಜೆಯವರ ಇಲಾಖೆಯಲ್ಲಿ ಕರೆಂಟ್ ಇಲ್ಲ. ಇನ್ನು ಮುಂದೆ ತೀವ್ರ ತೊಂದರೆಯಾಗುತ್ತದೆ.

ಕರೆಂಟ್‌ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರೇನಮ್ಮಾ? ನಿಮಗೆ ದುಡ್ಡು ಕೊಡಬೇಕಲ್ಲ? ಕೊಟ್ಟಿದ್ದಾರೆಯೇ? ಇದು Supplementary estimate, Finance Bill, ಕೊಡದೇ ಇದ್ದರೆ ಒತ್ತಾಯ ಮಾಡಬೇಕಾಗುತ್ತದೆ. ನಾನು ಪಾಸು ಮಾಡಬೇಕು, ಅದಕ್ಕೆ ಕರೆಂಟ್ ಕೊಂಡುಕೊಂಡು ಕರೆಂಟ್ ಕೊಡುವ ಕೆಲಸ ಆಗಬೇಕು. ಇಲ್ಲದಿದ್ದರೆ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತದೆ.

ಉಪಸಭಾಧ್ಯಕ್ಷರು : ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಕುರ್ಚಿಗಳಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ : ಈ ಬಾಲಕೃಷ್ಣ ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಹೋಗಿ ಕುಳಿತುಕೊಂಡು ಮಾತನಾಡುತ್ತಾರೆ.

ಶ್ರೀ ಸಿ.ಟಿ.ರವಿ : ಇದು ಭವಿಷ್ಯದ ಮುನ್ಸೂಚನೆ.

ಶ್ರೀ ಸಿದ್ದರಾಮಯ್ಯ : ರವಿಯವರಿಗೆ ಭವಿಷ್ಯ ಏನು ಎಂದು ಗೊತ್ತಾಗಿಬಿಟ್ಟಿದೆ. ಕಾಂಗ್ರೆಸ್ ಬರುವುದು 100% ಎಂದು ಗೊತ್ತಾಗಿದೆ.

ಶ್ರೀ ಸೊಗಡು ಶಿವಣ್ಣ : ತಾವು ಶೋಭಕ್ಕನವರನ್ನು ಕರೆಂಟ್ ಬಗ್ಗೆ ಕೇಳುತ್ತಿದ್ದೀರಲ್ಲ, ಆಗ ನಮಗೂ ಭವಿಷ್ಯ ಏನು ಎಂದು ಗೊತ್ತಾಯಿತು.

ಶ್ರೀ ಸಿದ್ದರಾಮಯ್ಯ : ಭವಿಷ್ಯ ಗೊತ್ತಾಯಿತಾ? ನೋಡಮ್ಮಾ, ಹೇಗೆ ತೀಟೆ ಮಾಡುತ್ತಿದ್ದಾರೆ ನೋಡಿ. ನೀವು ಸುಮ್ಮನೆ ಕುಳಿತಿದ್ದೀರಲ್ಲಮ್ಮಾ? ರೋಫ್ ಹಾಕಬೇಕು.

ಆದ್ದರಿಂದ, ಮಾನ್ಯ ಅಧ್ಯಕ್ಷರೆ, ಕರೆಂಟ್ ಸಮಸ್ಯೆ ಬಹಳ ಇದೆ. ಇನ್ನೂ ಮೇ ಮತ್ತು ಜೂನ್ ತಿಂಗಳಿನ ಹೊತ್ತಿಗೆ ಇದು ಬಹಳ ಸಮಸ್ಯೆಯಾಗಿ ಬಿಡುತ್ತದೆ. ಆಗ ಬೇಸಿಗೆ ಬರುತ್ತದೆ. ಬೇಸಿಗೆಯಲ್ಲಿ ಕುಡಿಯುವ ನೀರಿನದ್ದೇ ದೊಡ್ಡ ಸಮಸ್ಯೆಯಾಗಿ ಬಿಡುತ್ತದೆ. ಆ ಪವರ್ ಸಮಸ್ಯೆಯಿಂದಲೇ ಕುಡಿಯುವ ನೀರಿನದ್ದು ಕೂಡ ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ, ದಯವಿಟ್ಟು ಹಳ್ಳಿಗಾಡಿನಲ್ಲಿ ಬೆಳಿಗ್ಗೆ 5–6 ಗಂಟೆ ಕರೆಂಟ್ ಕೊಡಲಿಕ್ಕೆ ಏನಾದರೂ ಪ್ರಯತ್ನ ಮಾಡಬೇಕು. ಮೊದಲೇ ಕುಡಿಯಲಿಕ್ಕೆ ನೀರಿಲ್ಲ. ನಿಮ್ಮ ಹತ್ತಿರ ದುಡ್ಡು ಇಲ್ಲದಿದ್ದರೆ, ಕರೆಂಟ್ ಖರೀದಿ ಮಾಡುವುದಕ್ಕೆ ನಿಮಗೆ ಎಷ್ಟು

ದುಡ್ಡು ಬೇಕೋ ಅದನ್ನು ತೆಗೆದುಕೊಂಡು ಖರೀದಿ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಆ ಕಡೆಗೂ ಕೂಡ ಪ್ರಯತ್ನ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಈಗ ನಾವು PWD ಬಾಕಿ ಬಿಲ್‌ಗಳಿಗೆಲ್ಲಾ ದುಡ್ಡು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲಿ ತಮಗೆ ಎಲ್ಲೆಲ್ಲಿ ಬೇಕೋ ಅವರ ಕಡೆಗೆ ದುಡ್ಡ ಕೊಟ್ಟುಕೊಳ್ಳುತ್ತಾರೆ. ಇದು ಆಗಬಾರದು. ಎಲ್ಲಾ ಕಡೆಗೂ ಕೂಡ equitable distribution ಆಗಬೇಕು. ಎಲ್ಲಾ ಕ್ಷೇತ್ರಗಳಿಗೂ ಸಮಾನ ಹಂಚಿಕೆ ಆಗಬೇಕು. ಎಲ್ಲೆಲ್ಲಿ ಬಾಕಿ ಉಳಿದುಕೊಂಡಿದೆಯೋ, ಆ ಎಲ್ಲಾ ಕ್ಷೇತ್ರಗಳಿಗೂ ದುಡ್ಡು ಕೊಡತಕ್ಕಂಥ ಕೆಲಸ ಆಗಬೇಕು. ನಾವು ಇಲ್ಲಿ ಪಾಸ್ ಮಾಡುವುದು, ಅಲ್ಲಿ ಅವರು, ಅವರಿಗೆ ಇಷ್ಟ ಬಂದವರಿಗೆ ದುಡ್ಡು ಕೊಡುವಂತಾದ್ದು ಆಗಬಾರದು. Seniority ಮೇಲೆ ಕೊಡುವುದಿಲ್ಲ, ಅಲ್ಲಿ ಯಾವುದೇ norms ಇಲ್ಲ. ಯಾವುದೇ yardstick ಇಲ್ಲ, ತಮಗೆ ಇಷ್ಟ ಬಂದವರಿಗೆ ಕೊಟ್ಟುಬಿಡುತ್ತಿದ್ದಾರೆ. It should not happen. ಇದು ಆಗಬಾರದು. Election Code of Conduct February ತಿಂಗಳಿನಲ್ಲಿ ಬರುತ್ತದೆಂದು ಸುದ್ದಿ ಇದೆ. ಈಗ ಮಾಡತಕ್ಕಂಥ ಕೆಲಸಗಳನ್ನೆಲ್ಲಾ ಜನವರಿಯೊಳಗಾಗಿ ಮಾಡಿದರೆ you will be saved. ಇಲ್ಲದೆ ಹೋದರೆ, Code of Conduct ಬಂದು ಬಿಡುತ್ತದೆ. ಯಾರಿಗೂ ಏನೂ ಇಲ್ಲದಂತಾಗುತ್ತದೆ. ಅದಕ್ಕೋಸ್ಕರವಾಗಿ PWD ಬಾಕಿ ಬಿಲ್‌ಗಳೇನಿವೆಯೋ, ಅದೆಲ್ಲವನ್ನೂ ಕೂಡ ಕೊಡಬೇಕು. ಕೇವಲ ನಿಮ್ಮ ಪಾರ್ಟಿಯವರ ಕ್ಷೇತ್ರಗಳಿಗೆ ಮಾತ್ರವೇ ಕೊಟ್ಟುಕೊಳ್ಳುವುದಕ್ಕೆ–ಹೋಗಬೇಡಿ. ಬರೇ ನಿಮ್ಮ ಪಾರ್ಟಿಯವರ ಕ್ಷೇತ್ರಗಳಿಗೆ ಕೊಟ್ಟುಕೊಂಡರೆ, ಬೇರೆಯವರೆಲ್ಲಾ ಎಲ್ಲಿಗೆ ಹೋಗಬೇಕು? ನಾವು ಕೇವಲ ಪಾಸ್ ಮಾಡುವುದಕ್ಕಾಗಿ ಮಾತ್ರವೇ ಇಲ್ಲಿದ್ದೇವೆಯೇ? ನಿಮಗೆ ಇಷ್ಟ ಬಂದ ಹಾಗೆ ದುಡ್ಡು ಕೊಟ್ಟುಕೊಳ್ಳುವುದಕ್ಕೆ ನೀವು ಇದ್ದೀರಾ? ಒಂದೊಂದು constituency ಗೆ 238 ಕೋಟಿ ರೂ.ಗಳು ಮಂಜೂರಾತಿಯಾದರೆ, ಇನ್ನೊಂದು constituency ಗೆ 5 ಕೋಟಿ ರೂ.ಗಳು ಸಹ ಮಂಜೂರಾತಿ ಯಾಗುವುದಿಲ್ಲ. ನಾನು ಅದು ಯಾವುದೋ ಇನ್ನೊಂದು ಕಡೆಗೆ ಕೇಳಿದೆ.

500 ಕೋಟಿ ರೂ.ಗಳನ್ನು ಒಂದು constituency ಗೆ, 238 ಕೋಟಿ ರೂ.ಗಳನ್ನು ಇನ್ನೊಂದು constituency ಗೆ ಮಂಜೂರಾತಿ ಮಾಡಲಾಗಿದೆ. ನಾವು ಇಲ್ಲಿ ಹಣವನ್ನು ಮಂಜೂರು ಮಾಡಲು ಪಾಸ್ ಮಾಡುತ್ತೇವೆ. ಸದನದಲ್ಲಿ ಕೇವಲ ಕಣ್ಣುಮುಚ್ಚಿಕೊಂಡು ಪಾಸ್ ಮಾಡುವುದಕ್ಕೆ ನಾವಿದ್ದೇವೆಯೇ? So, it should be distributed equally. There should be equitable distribution. ಎಲ್ಲಾ ಕ್ಷೇತ್ರಗಳಿಗೂ ಆಗಬೇಕು. ಒಂದು ಕಡೆಗೆ ಅಸಮಾನತೆ ಹೋಗಬೇಕು ಎಂದು ಹೇಳುತ್ತೀರಿ. ಇನ್ನೊಂದು ಕಡೆಯಲ್ಲಿ ಡಾ: ನಂಜುಂಡಪ್ಪ ವರದಿಯಲ್ಲಿ ಯಾವುದು ಮುಂದುವರೆದ ತಾಲ್ಲೂಕು ಎಂದು ಗುರುತಿಸಿದ್ದಾರೋ, ಅಲ್ಲಿಗೆ ಹೆಚ್ಚಿಗೆ ದುಡ್ಡನ್ನು ರಿಲೀಸ್ ಮಾಡುವುದು. ಇದು ಸರಿಯಲ್ಲ. ಎಲ್ಲಿ most backward taluk ಎಂದು ಗುರುತಿಸಿದ್ದಾರೋ, ಅಲ್ಲಿಗೆ ದುಡ್ಡನ್ನೇ ಮಂಜೂರು ಮಾಡುವುದಿಲ್ಲ. ಯಾವ ತರಹದ approach ಇದು? ಇದು ನಂಜುಂಡಪ್ಪನವರ ವರದಿಯನ್ನು ಜಾರಿ ಮಾಡತಕ್ಕ ಕ್ರಮವೇ? ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒತ್ತಾಯ ಮಾಡುತ್ತೇನೆ. Pending bills ಎಲ್ಲಾ clear ಮಾಡಬೇಕು. ಜೊತೆಗೆ ಎಲ್ಲಾ ಕ್ಷೇತ್ರಗಳಿಗೂ ಕೂಡ depending upon the pending bills and seniority ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. PWD ಯಲ್ಲಿ, Rural Development ಇಲಾಖೆಯಲ್ಲಿ ನಾನು ನೋಡುತ್ತಿದ್ದೇನೆ. 5–10 ಲಕ್ಷ ರೂ.ಗಳಿಗೆಲ್ಲಾ ಎಲ್ಲಾ ಕಡೆಗೂ piece works ಕೊಡಲಿಕ್ಕೆ ಶುರು ಮಾಡಿಕೊಂಡು ಬಿಟ್ಟಿದ್ದಾರೆ. ಇದು ನಮಗೇ ಗೊತ್ತಿರುವುದಿಲ್ಲ. ಅದನ್ನು ತೆಗೆದುಕೊಂಡು, ಅಣ್ಣಾ ನಾನು ಇದನ್ನು ತೆಗೆದುಕೊಂಡು ಬಂದಿದ್ದೇನೆ' ಎಂದು ನಮ್ಮ ಹತ್ತಿರ ಬರುತ್ತಾರೆ. ಹೇಗೆ ತೆಗೆದುಕೊಂಡು ಬಂದಿರಿ ಎಂದರೆ, 5% ಕೊಟ್ಟಿದ್ದೇವೆ. ಎನ್ನುತ್ತಾರೆ. ಅದು ಎಲ್ಲಿ ನಡೆಯುತ್ತಿದೆ? ಯಾರು ಮಾಡುತ್ತಿದ್ದಾರೆ? ಏಕೆ ನಡೆಯುತ್ತಿದೆ? ಇದಕ್ಕೆಲ್ಲಾ ಕಡಿವಾಣ ಹಾಕದೆ ಹೋದರೆ, ಇಲ್ಲಿ ನಾವು ಮಂಜೂರು ಮಾಡಿಕೊಡತಕ್ಕಂಥ ಹಣವನ್ನು ನೀವು ತೆಗೆದುಕೊಂಡು ಹೋಗಿ, ಯಾರದೋ ಪಾಲಾಗುತ್ತದೆ, ಯಾರೋ ತಿಂದು

ಕೊಂಡು ಬಿಡುತ್ತಾರೆ ಎಂದರೆ ಹೇಗೆ? ಮತ್ತೆ ನಾವು ಏಕೆ ಇದನ್ನು ಮಂಜೂರು ಮಾಡಬೇಕು? ನಾನು ಎಲ್ಲೋ ಕೇಳಿದೆ. ಇತ್ತೀಚೆಗೆ ಒಂದು developement ಅನ್ನು ನೋಡಿದ್ದೇನೆ. ಈ contractorಗಳೇ estimates ಅನ್ನು prepare ಮಾಡುತ್ತಾರೆ. This is a new development. Contractor ಗಳೇ estimate ಮಾಡುತ್ತಾರೆ. MB record ಅನ್ನೂ ಅವರೇ ಮಾಡಿಬಿಡುತ್ತಾರೆ. ಆ ಇಂಜಿನಿಯರ್‌ಗಳು ಸುಮ್ಮನೆ ಕುಳಿತುಕೊಂಡು ಅದಕ್ಕೆ ಸೈನ್ ಹಾಕಿಬಿಡುತ್ತಾರೆ. These are all happening. Never in the history, ಹಿಂದೆ ಯಾರ ಕಾಲದಲ್ಲೂ ಈ ರೀತಿ ಆಗುತ್ತಿರಲಿಲ್ಲ. ಈಗ ಈ ರೀತಿಯಾಗುತ್ತಿದೆ. ಆದ್ದರಿಂದ, ಇದಕ್ಕೆಲ್ಲಾ ಕಡಿವಾಣ ಹಾಕಬೇಕು. ನಾವು ಇಲ್ಲಿ ಕುಳಿತುಕೊಂಡು ಹಣ ಮಂಜೂರಾತಿ ಮಾಡಿಕೊಡುತ್ತೇವೆ. ಮಾನ್ಯ ಅಧ್ಯಕ್ಷರೆ, ಈ ತರಹ ಎಲ್ಲಾ ಮಾಡಿದರೆ ಹೇಗಾಗುತ್ತದೆ? ನಾನು ಇದರಲ್ಲಿ ಉದ್ದಕ್ಕೂ ನೋಡಿಕೊಂಡು ಬಂದೆ. Pay revision ಆಗಿದೆ, ಅದಕ್ಕೋಸ್ಕರವಾಗಿ ನಾವು ಇಷ್ಟು ದುಡ್ಡು ಕೊಡಬೇಕು ಎಂದು ಪ್ರತಿ ಇಲಾಖೆಗಳಿಗೂ ತೋರಿಸಿಕೊಂಡು ಬಂದಿದ್ದೀರಿ. 30–50 ಕೋಟಿ ರೂ.ಗಳವರೆಗೆ ಕೊಡಬೇಕು ಎಂದು ತೋರಿಸಿದ್ದೀರಿ. ಬಜೆಟ್ ತಯಾರು ಮಾಡುವಾಗ, annual statement ತಯಾರು ಮಾಡುವಾಗ ಆರ್ಥಿಕ ಇಲಾಖೆಯವರು ಏನು ಮಾಡುತ್ತಿದ್ದರು?

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇವರಿಗೆ ಇದರ ಬಗ್ಗೆ ತಲೆ ಹೊಳೆಯಲಿಲ್ಲವೇ? Official Pay Committee ಶಿಫಾರಸ್ಸುಗಳು ಯಾವಾಗ ಬಂದವು? ನಿನ್ನೆ ಬಂತೇ? ಮೊನ್ನೆ ಬಂತೇ? First instalment ಆದ ಮೇಲೆ ಬಂತೇ? ಬಜೆಟ್ ಮಂಡಿಸಿದ ಮೇಲೆ ಬಂತೇ? ಬಜೆಟ್ ಮಂಡಿಸುವಾಗ ಒಂದು discipline ಇಲ್ಲ. Fiscal descipline ಎಲ್ಲಾ ಹಾಳಾಗಿದೆ. ಆದ್ದರಿಂದ, ಮಾನ್ಯ ಅಧ್ಯಕ್ಷರೆ, ಈ ತರಹ ನಮಗೆ supplementary estimates ನಲ್ಲಿ ಇಷ್ಟು ದುಡ್ಡು ಮಂಜೂರು ಮಾಡಿಕೊಡಿ ಎಂದು ಕೇಳಿಕೊಂಡು ಬಂದರೆ ಹೇಗೆ? ಸಂವಿಧಾನದಲ್ಲಿ

ಅವಕಾಶವಿದೆ, ಆದ್ದರಿಂದ ಅದನ್ನು ಮಾಡಬೇಕು. ಎಲ್ಲಾ ಹಿಂದಿನ ಸರ್ಕಾರಗಳು ಮಾಡಿಕೊಂಡು ಬಂದಿವೆ, ನಾವೂ ಮಾಡುತ್ತೇವೆ ಎನ್ನುವುದು ಆಗಬಾರದು. There must be some fiscal discipline ಅದು ಇಲ್ಲದೆ ಹೋದರೆ, ನಾವು constitution ನಲ್ಲಿ ವರ್ಷಕ್ಕೊಂದು ಬಜೆಟ್ ಮಂಡಿಸಬೇಕು, annual statement ಮಂಡಿಸಬೇಕು, ಅದು assembly ನಲ್ಲಿ approve ಆಗಬೇಕು, ಅದು ಮಾರ್ಚ್‌ನೊಳಗೆ approve ಆಗಬೇಕು ಇವೆಲ್ಲಾ ನಿಬಂಧನೆಗಳನ್ನು ನಾವೇಕೆ ಸಂವಿಧಾನದಲ್ಲಿ ಮಾಡಿಕೊಂಡಿದ್ದೇವೆ? ಮಾನ್ಯ ಅಧ್ಯಕ್ಷರೆ, ಇವುಗಳಿಗೆಲ್ಲಾ ನಾವು ಕಡಿವಾಣ ಹಾಕದೆ ಹೋದರೆ, ಈ ರೀತಿಯಾಗಿ ನಾವು ಕಣ್ಣುಮುಚ್ಚಿಕೊಂಡು ಒಪ್ಪಿಗೆ ಕೊಡಲಿಕ್ಕೆ ಸಾಧ್ಯವಿಲ್ಲ. ಯಾವುದಕ್ಕೆ ಅಗತ್ಯವಿದೆಯೋ ಅದಕ್ಕೆ ಕೊಡಬೇಕಾದುದು ಅನಿವಾರ್ಯ. ಕುಡಿಯುವ ನೀರಿಗೆ ಬಿಟ್ಟು ನೀವು ಇನ್ನ್ಯಾವುದಕ್ಕೋ ಕೇಳಿದರೆ ದುಡ್ಡು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ, ಕುಡಿಯುವ ನೀರಿಗೆ ಕೂಡಲೇ ಎಷ್ಟು ದುಡ್ಡು ಬೇಕಾಗುತ್ತದೆ ಎಂದು Assembly ಮುಗಿಯುತ್ತಿದ್ದಂತೆ ಎಲ್ಲಾ ಜಿಲ್ಲಾಧಿಕಾರಿಗಳನ್ನು ಕರೆದು, ಕುಡಿಯುವ ನೀರಿಗೆ ಎಷ್ಟು ಅಗತ್ಯವಿದೆಯೋ, ಅಷ್ಟು ದುಡ್ಡನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಪೂರಕ ಅಂದಾಜುಗಳನ್ನು ಇವರು ಸರಿಯಾದ ರೀತಿಯಲ್ಲಿ explain ಮಾಡದಿರುವುದರಿಂದ, ಹೇಗೆ ನಾವು ಹಣವನ್ನು ಒದಗಿಸಿಕೊಳ್ಳುತ್ತೇವೆ ಎನ್ನುವುದರ ಬಗ್ಗೆ ಯಾವುದೇ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ಇವರ ಕೈಯ್ಯಲ್ಲಿ ಅದನ್ನು ಒದಗಿಸಿಕೊಳ್ಳುವುದಕ್ಕಾಗುವುದಿಲ್ಲ. ಕೊನೆಗೆ ಏನಾಗುತ್ತದೆ ಎಂದರೆ, ಹಣ ಬಿಡುಗಡೆ ಮಾಡುವುದಿಲ್ಲ. Allocation ಬೇರೆ, release ಬೇರೆ, expenditure ಬೇರೆ. ಆಮೇಲೆ, ಕೊನೆಯಲ್ಲಿ un-spent money ಎಂದು ಬರೆದು ಬಿಡುವುದು. This is how they are doing. ಪ್ರತಿ ವರ್ಷ 60–70% ಖರ್ಚಾಗುತ್ತದೆ. ಇನ್ನುಳಿದ 30–40% un-spent money ಆಗುತ್ತದೆ. This is what is happening ಆ

ಕಾರಣದಿಂದ ಇವುಗಳಿಗೆಲ್ಲಾ ಕಡಿವಾಣ ಹಾಕಬೇಕೆಂದು ಹೇಳುತ್ತಾ. ಈ Appropriation Bill ಅನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ಮಾನ್ಯ ಪ್ರಕಾಶ್‌ರವರೆ, ದಯವಿಟ್ಟು ಕುಳಿತುಕೊಳ್ಳಿ. ನಾನು ಈಗ ಮಾತಾಡಲು ಮಾನ್ಯ ರೇವಣ್ಣನವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ (ಚಿಕ್ಕೋಡಿ. ಸದಲಗ) : ಮಾನ್ಯ ರೇವಣ್ಣನವರೆ, ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ. ನಾನು ಹೆಚ್ಚೇನೂ ಮಾತನಾಡುವುದಿಲ್ಲ. ನಾನು ಕೇವಲ ಎರಡು ನಿಮಿಷ ಮಾತ್ರವೇ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಪ್ರತಿ ಕ್ಷೇತ್ರಕ್ಕೂ 10–12 ಸಾವಿರ ಮನೆಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು Appropriation Bill ಬಿಟ್ಟು ಬೇರೆ ಏನನ್ನೋ ಮಾತನಾಡುತ್ತಿದ್ದೀರಲ್ಲಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನಾನು ಪೂರಕ ಅಂದಾಜುಗಳ ಮೇಲೆಯೇ ಮಾತನಾಡುತ್ತಿದ್ದೇನೆ. ನಾನು ಬೇರ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ. ಇದಕ್ಕೆ 400 ಕೋಟಿ ರೂ.ಗಳ ಹಣವನ್ನು ಒದಗಿಸಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ,..

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ಮಾನ್ಯ ರೇವಣ್ಣನವರೆ, ತಾವು ದಯವಿಟ್ಟು ಎರಡು ನಿಮಿಷ ನಮ್ಮ ಜೊತೆಗೆ ಸಹಕರಿಸಬೇಕು. ನೀವು ಗಂಟೆಗಟ್ಟಲೇ ಮಾತನಾಡುತ್ತೀರಿ, ನಮಗೆ ಐದು ನಿಮಿಷಗಳಾದರೂ ಮಾತನಾಡಲಿಕ್ಕೆ ಅವಕಾಶ ಕೊಡಿ. ನಾವು ನಿಮಗೆ ಮಾತನಾಡಲು ಯಾವಗಲೂ ಬೇಡ ಎಂದಿಲ್ಲ. ನಾನು ಕೇವಲ ಐದು ನಿಮಿಷಗಳಲ್ಲೇ ನನ್ನ ವಿಚಾರಗಳನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಬಸವ ಆಶ್ರಯ ಯೋಜನೆಯಲ್ಲಿ ಪ್ರತಿಯೊಂದು ಕ್ಷೇತ್ರಕ್ಕೆ 10–12 ಸಾವಿರ ಮನೆಗಳನ್ನು ಮಾನ್ಯ ವಸತಿ ಸಚಿವರು ಮಂಜೂರು ಮಾಡಿದ್ದಾರೆ.

ಈಗಾಗಲೇ ಅದನ್ನು ಎಲ್ಲಾ ಮನೆಗಳು ಮೊದಲನೆಯ ಸ್ಟೇಜ್, ಎರಡನೆಯ ಸ್ಟೇಜ್ ಎಂದು ಕಟ್ಟಲಾಗಿದೆ. ತಾವು ಈ ನಾಲ್ಕುನೂರು ಕೋಟಿ ಕೊಡುವುದಕ್ಕಿಂತ ಮೊದಲು ತಾಲ್ಲೂಕುವಾರು ಎಷ್ಟೆಷ್ಟು ಮನೆಗಳ ಪ್ರೋಗ್ರೆಸ್ ಆಗಿವೆ ಅಲ್ಲಿ ಎಷ್ಟು ಮನೆಗಳಿಗೆ ಹಣ ಬೇಕಾಗಿದೆ ಎನ್ನುವುದರ ಬಗ್ಗೆ ವಿಚಾರ ಮಾಡಿಕೊಳ್ಳಬೇಕು. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ಬರಗಾಲಕ್ಕೆ ಎಷ್ಟು ಮತ್ತು ಕುಡಿಯುವ ನೀರಿಗೆ ಎಷ್ಟು ಹಣ ಬೇಕು ಎಂಬ ಬಗ್ಗೆ ತಾವು ಜಿಲ್ಲಾಧಿಕಾರಿಗಳಿಂದ ಮಾಹಿತಿಗಳನ್ನು ಪಡೆದು ಕೊಂಡು ಆ ಮನೆಗಳನ್ನು ಮಾರ್ಚ್ 31 ರೊಳಗೆ ಪೂರ್ಣ ಮಾಡುವುದಕ್ಕೆ ಎಷ್ಟು ಹಣ ಬಸವ ಆಶ್ರಯ ಯೋಜನೆ ಮನೆಗಳಿಗೆ ಬೇಕೋ ಆ ಹಣವನ್ನು ಈ ಪೂರಕ ಅಂದಾಜು ಪತ್ರಿಕೆಯಲ್ಲಿ ಒದಗಿಸಬೇಕು. ಈಗಾಗಲೇ ಇಂದಿರಾ ಆವಾಸ್ ಯೋಜನೆ ಮನೆಗಳಿಗೆ ಹಣದ ಕೊರತೆಯಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಎರಡೂ ಕಡೆಯಿಂದ ಹಣ ಸಿಗುವುದರಿಂದ ಒಂದು ಮನೆಗೆ 75 ಸಾವಿರ ರೂ.ಗಳು ಸಿಗುವುದರಿಂದ ಇಂದಿರಾ ಆವಾಸ್ ಯೋಜನೆಯ ಮನೆಗಳನ್ನು ಕಟ್ಟುವುದಕ್ಕೆ ಯಾರಿಗೂ ತೊಂದರೆಯಾಗುವುದಿಲ್ಲ. ಇನ್ನು ಅಂಬೇಡ್ಕರ್ ಯೋಜನೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಕೇಂದ್ರ ಸರ್ಕಾರ ಏನು ಹಣವನ್ನು ಒದಗಿಸಿದೆ ಅದಕ್ಕೆ ರಾಜ್ಯ ಸರ್ಕಾರ 25 ಸಾವಿರ ರೂ.ಗಳನ್ನು ಕೊಟ್ಟಿಲ್ಲ. ಅಂಬೇಡ್ಕರ್ ಯೋಜನೆಯಲ್ಲಿ ಒಂದು ಮನೆಯನ್ನು 50 ಸಾವಿರ ರೂ.ಗಳಲ್ಲಿ ಕಟ್ಟಬೇಕಾಗಿದೆ. ಅದಕ್ಕೂ ಕೂಡ 25 ಸಾವಿರ ರೂ.ಗಳು, ಅಂಬೇಡ್ಕರ್ ಯೋಜನೆಯ ಮನೆಗಳಿಗೂ 25 ಸಾವಿರ ರೂ.ಗಳನ್ನು ಏರಿಕೆ ಮಾಡಿ, ಅದಕ್ಕೂ ಕೂಡ 75 ಸಾವಿರ ರೂ.ಗಳನ್ನು ಒದಗಿಸಿ, ಅಂಬೇಡ್ಕರ್ ಯೋಜನೆಯ ಮನೆಗಳನ್ನು ಇವತ್ತು ಕೇಂದ್ರ ಸರ್ಕಾರ ಕ್ಷೇತ್ರವಾರು, ಗ್ರಾಮ ಪಂಚಾಯತಿವಾರು ಏನು ಮಂಜೂರು ಮಾಡಿದೆ ಅವುಗಳಿಗೂ ಕೂಡ ಹಣವನ್ನು ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಎರಡನೆಯ ಕಂತಿನ ಪೂರಕ ಬಜೆಟ್‌ನ್ನು ಇವತ್ತು

ಮಂಡನೆ ಮಾಡಿದ್ದಾರೆ. ಸುಮಾರು 25 ಇಲಾಖೆಗಳದ್ದು ಇದರಲ್ಲಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ, ಇವತ್ತು ಉದಾಹರಣೆಗೆ ಹೇಳಬೇಕೆಂದರೆ ತೋಟಗಾರಿಕೆ ಇಲಾಖೆಯಲ್ಲಿ ನಮ್ಮಲ್ಲೇ ಏನು ಬೆಳೆಗಳನ್ನು ಬೆಳೆದಿದ್ದಾರೆ ಅದು ಸಂಪೂರ್ಣ ನಾಶವಾಗಿದೆ. ಅದರಲ್ಲಿ ಇವತ್ತು ಸುಮಾರು ಕಡೆ ಬರಗಾಲ ಎಂದು ಘೋಷಣೆ ಮಾಡಲಾಗಿದೆ. ಬಹುತೇಕ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಎಲ್ಲಿ ನಷ್ಟವಾಗಿದೆ ಅದಕ್ಕೆ ಹಣ ಕೊಡಬೇಕು ಎಂದು ಸ್ವಲ್ಪ ಹಣವನ್ನು ಇಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಏಕೆಂದರೆ ರೈತರು ಇವತ್ತು ಬಹಳ ಸಂಕಷ್ಟದಲ್ಲಿದ್ದಾರೆ. ಯಾವ ಯಾವುದಕ್ಕೋ ಕೊಡುತ್ತೀರಿ ರೈತರಿಗೆ, ಅದೇ ರೀತಿ ರೈತರಿಗೋಸ್ಕರವೇ ಇದಕ್ಕೂ ಕೂಡ ಒಂದು ಇನ್ನೂರೋ, ಮುನ್ನೂರೋ ಕೋಟಿ ರೂ.ಗಳನ್ನು ಕೊಟ್ಟರೆ ಏನಾಗುತ್ತದೆ? ಈ ಪೂರಕ ಬಜೆಟ್‌ನಲ್ಲಿ ಯಾವ ರೈತರು ಇವತ್ತು ಸಾಲ ಮಾಡಿದ್ದಾರೆ, ಕೆಲವು ಕಡೆ ಸಾಲ ಮನ್ನಾ ಎಂದು ಮಾಡಿದ್ದೀರಿ, ಉದಾಹರಣೆಗೆ ಹೇಳುವುದಾದರೆ ಸಾಲ ಮನ್ನಾ ಯೋಜನೆ ಮಂಡ್ಯ ಜಿಲ್ಲೆ ಸೇರಿದಂತೆ ಕೆಲವು ಜಿಲ್ಲೆಗಳಿಗೆ ಅನ್ವಯವೇ ಆಗುವುದಿಲ್ಲ. ಸಾಲ ಮನ್ನಾ ಯೋಜನೆಯನ್ನು ದಿನಾಂಕ: 01–04–2011 ರಿಂದ 01–04–2012 ರವರೆಗೆ ಒಂದು ವರ್ಷ ತರಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಕಳೆದ ಬಾರಿ ತಂದಿದ್ದೆವು. ಆಗ ಮಾನ್ಯ ಮುಖ್ಯಮಂತ್ರಿಗಳು ಇದರ ಸಾಧಕ ಬಾಧಕಗಳನ್ನು ನೋಡಿ ಮಾಡುತ್ತೇವೆಂದು ಇದೇ ಸದನದಲ್ಲಿ ಹೇಳಿದ್ದರು. ಈ ರೈತರ ಸಾಲ ಮನ್ನಾ ಯೋಜನೆಯಲ್ಲಿ ಕೆಲವು ಕಡೆ ಏನಾಗಿದೆಯೆಂದರೆ ದಿನಾಂಕ: 01–08–2011 ರಿಂದ ಅಥವಾ 01–06–2011 ರಿಂದ ತಂದಿದ್ದಾರೆ. ಕೆಲವರು ನಾಲ್ಕು ತಿಂಗಳು ಮುಂಚೆಯೇ, ಸಾಲ ತೆಗೆದುಕೊಂಡಿದ್ದಾರೆ. ಏಕೆಂದರೆ ಕಬ್ಬು ಬೆಳೆಗಾರರು ಇರುತ್ತಾರಲ್ಲಾ ಅವರು ಹನ್ನೆರಡು ತಿಂಗಳು ಇರುತ್ತಾರೆ ಮಾನ್ಯ ಸಭಾಧ್ಯಕ್ಷರೆ, ಅದಕ್ಕಾಗಿ ದಯಮಾಡಿ ಈ ಪೂರಕ ಅಂದಾಜುಗಳ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 01–04–2011 ರಿಂದ 01–04–2012 ರವರೆಗೆ ಜಾರಿಗೆ ಬರುವಂತೆ ಯಾವ ಯಾವ ರೈತರು ಸಾಲ ತೆಗೆದುಕೊಂಡಿದ್ದಾರೆ, 25 ಸಾವಿರ ರೂ.ಗಳನ್ನು ಮನ್ನಾ ಮಾಡಬೇಕು, ಆ

ಬಗ್ಗೆ ಪೂರಕ ಅಂದಾಜುಗಳ ಮೇಲೆ ಉತ್ತರ ಕೊಡುವಾಗ ಹೇಳಬೇಕು ಮತ್ತು ಅದನ್ನು ಪೂರಕ ಅಂದಾಜುಗಳ ಬಜೆಟ್‌ನಲ್ಲಿ ಸೇರಿಸಬೇಕು. ಇದರ ಜೊತೆಗೆ ಪಶು ಸಂಗೋಪನಾ ಇಲಾಖೆಯಲ್ಲಿ ಈಗಾಗಲೇ ನಾಲ್ಕು ಪಶುಸಂಗೋಪನಾ ಕಾಲೇಜುಗಳನ್ನು ತೆರೆದಿದ್ದಾರೆ. ಆ ಕಾಲೇಜುಗಳಿಗೆ ಹಣವನ್ನು ಕೊಟ್ಟಿದ್ದೀರ? ಈಗಾಗಲೇ ಕೆಲವು ಕಾಲೇಜುಗಳಲ್ಲಿ ನಾರ್ಮ್ಸ್ ಪ್ರಕಾರ ಕಟ್ಟಡವಿಲ್ಲವೆಂದು ಹೇಳಿ ನಿಮ್ಮ ಕೇಂದ್ರದ ಯೂನಿವರ್ಸಿಟಿಯವರು objection ಹಾಕಿರುವುದರಿಂದ ಅಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ಇವತ್ತಿಗೆ ದಿವಸ ಸರ್ಟಿಫಿಕೇಟ್ ಸಿಗುತ್ತಿಲ್ಲ. ಅವರ ಕೋರ್ಸ್ ಕಂಪ್ಲೀಟ್ ಆಗಿದ್ದರೂ ಕೂಡ ಅವರಿಗೆ ಸರ್ಟಿಫಿಕೇಟ್ ಸಿಗುತ್ತಿಲ್ಲ. ಈ ವಿಚಾರ ಮಾನ್ಯ ಮಂತ್ರಿಗಳಿಗೆ ಗೊತ್ತಿರಬೇಕು. ಉದಾಹರಣೆಗೆ ಹಾಸನದ ಕಾಲೇಜಿರಬಹುದು, ಶಿವಮೊಗ್ಗದ ಕಾಲೇಜಿರಬಹುದು, ಬೀದರ್ ಇರಬಹುದು, ನಾನು ಆ ಕಾಲೇಜು, ಈ ಕಾಲೇಜು ಎಂದು ಹೇಳುತ್ತಿಲ್ಲ. ಕೆಲವು ಕಾಲೇಜುಗಳಿಗೆ ಹಣವನ್ನು ಕೊಡುವುದಕ್ಕೆ ನಿಮಗೆ ಏನು ತೊಂದರೆಯಿದೆ? ಏನಾದರೂ ಹಣಕಾಸಿನ ತೊಂದರೆ ಇದೆಯೆ? ಈಗ ಆ ಕಾಲೇಜುಗಳನ್ನು ಅಲ್ಲಿಗೆ ಇವತ್ತು ಸೇರಿಸಿಯೇ ಇಲ್ಲ. ಅದಕ್ಕಾಗಿ ಒಂದು ನೂರು ಕೋಟಿ ರೂ.ಗಳನ್ನು ಕೊಡಿ ನೀವು ವೆಟರ್ನರಿ ಡಾಕ್ಟರ್‌ಗಳು ಬೇಕು ಎನ್ನುತ್ತೀರಿ. 350 ವೆಟರ್ನರಿ ಡಾಕ್ಟರ್ ಹುದ್ದೆಗಳು ಖಾಲಿ ಇದೆಯೆಂದು ಹೇಳುತ್ತೀರಿ. ಒಂದೊಂದು ವೆಟರ್ನರಿ ಕಾಲೇಜಿನಲ್ಲಿ ಇನ್ನೂ ಐವತ್ತು, ಐವತ್ತು ವಿದ್ಯಾರ್ಥಿಗಳಿಗೆ ಸೀಟ್ ಹೆಚ್ಚು ಮಾಡಿಕೊಡಿ. ಬಿಲ್ಡಿಂಗ್‌ಗಳಲ್ಲಿ ಮೂಲಭೂತ ಸೌಕರ್ಯವನ್ನು ನೀವು ಕೊಡದೇ ಕೇವಲ ಆ ಕಾಲೇಜುಗಳನ್ನು ತೆರೆದಿರುವುದರಿಂದ ಈಗ ಆ ಕಾಲೇಜುಗಳಲ್ಲಿ ಕೋರ್ಸ್ ಕಂಪ್ಲೀಟ್ ಮಾಡಿರುವ ವಿದ್ಯಾರ್ಥಿಗಳಿಗೆ ಡಿಗ್ರಿ ಸರ್ಟಿಫಿಕೇಟ್ ಸಿಗುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ ಹಣಕಾಸಿನ ಸಚಿವರಾಗಿದ್ದಾರೆ. ಆದುದರಿಂದ ಆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳು ಏನು ಬೇಕೋ ಅದನ್ನು ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಇನ್ನು ಕೃಷಿ ಕಾಲೇಜುಗಳಿಗೂ ಅಷ್ಟೆ. ಕೆಲವು ಕೃಷಿ ಕಾಲೇಜುಗಳು ಎಂದು open ಮಾಡಿದ್ದೀರಿ. ಆ ಕೃಷಿ ಕಾಲೇಜುಗಳಿಗೆ

ಮೂಲಭೂತ ಸೌಕರ್ಯಗಳು ಬೇಡವೆ? ಆ ಕೃಷಿ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕೆಂದು ಮನವಿ ಮಾಡುತ್ತೇನೆ. ಕೃಷಿ ಕಾಲೇಜಿರಬಹುದು, ವೆಟರ್ನರಿ ಕಾಲೇಜಿರಬಹುದು, ಈ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪೂರಕ ಅಂದಾಜಿನಲ್ಲಿ ಆದ್ಯತೆ ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಹೇಳಬೇಕೆಂದರೆ, ಇವತ್ತು ಮಧ್ಯಾಹ್ನ ನೀವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ, ಆ ಸಂದರ್ಭದಲ್ಲಿ ಕುಡಿಯುವ ನೀರಿನ ಬಗ್ಗೆ, ಈ ರಾಜ್ಯದಲ್ಲಿ 157 ತಾಲ್ಲೂಕುಗಳಲ್ಲಿ ಬರಗಾಲವಿರುವ ಬಗ್ಗೆ ನಾನು ಮಾತನಾಡುತ್ತೇನೆ. ಏಕೆಂದರೆ ಇವತ್ತು ಕುಡಿಯುವ ನೀರಿನ ಪರಿಸ್ಥಿತಿ ಏನಾಗಿದೆಯೆಂದರೆ, ಈ ಸಮಸ್ಯೆ ಬಗೆಹರಿಸಲು 157 ತಾಲ್ಲೂಕುಗಳಿಗೆ ಒಂದು ಕೋಟಿಯಲ್ಲ, ಕನಿಷ್ಠ ನೀವು ಮೂರು ಕೋಟಿ ರೂ.ಗಳನ್ನು ಕೊಟ್ಟರೂ ಕೂಡ ಸಾಲುವುದಿಲ್ಲ. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಇಂದು ಕುಡಿಯುವ ನೀರಿಗೆ ಅಷ್ಟೊಂದು ತೊಂದರೆಯಿದೆ. ಆದುದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಘೋಷಣೆಯನ್ನು ಮಾಡಬೇಕಾಗುತ್ತದೆ. ಬಾಕಿಯದ್ದು ಏನಾದರೂ ಇರಲಿ. ಕಡೇ ಪಕ್ಷ ಕುಡಿಯುವುದಕ್ಕಾದರೂ ನೀರು ಕೊಡದೇ ಹೋದರೆ ಹೇಗೆ ಹೇಳಿ. ಕೆಲವು ಕಡೆ ಇವತ್ತು ಏನಾಗಿದೆ? ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಕೆಲವು ಕಡೆ ಇವತ್ತು ಹಳ್ಳಿಗಳಲ್ಲಿ ಇವತ್ತು ನಮ್ಮ ಯಲಿಯೂರು ಎನ್ನುವ ಗ್ರಾಮದಿಂದ ನನಗೆ ಫೋನ್ ಮಾಡಿದ್ದರು, ಇಲ್ಲಿ ಹೊರಗಡೆಯಿಂದ ಟ್ರ್ಯಾಕ್ಟರ್‌ನಲ್ಲಿ ನೀರು ಕೊಡುತ್ತಿದ್ದಾರೆ. ಅದೂ ಆ ಕೆಲಸವನ್ನು ಆ ಊರಿನವರೇ ಮಾಡುತ್ತಿದ್ದಾರೆ. ಈ ಪರಿಸ್ಥಿತಿ ಬಂದೊದಗಿದೆ. ಅದಕ್ಕಾಗಿ ನೀವು ದಯಮಾಡಿ ಕುಡಿಯುವ ನೀರಿಗಾಗಿ ಬೋರ್‌ವೆಲ್ ತೆಗೆಯುವುದಕ್ಕೆ ಕೇಂದ್ರ ಸರ್ಕಾರದಿಂದ ಬರುವ ಹಣದಲ್ಲಿ ಆಗುವುದಿಲ್ಲ. ರಾಜ್ಯ ಸರ್ಕಾರದ ಹಣವನ್ನು ನೀವು ವಿನಿಯೋಗ ಮಾಡಬೇಕಾಗುತ್ತದೆ. ಜಿಲ್ಲಾ ಪಂಚಾಯತ್ ಮುಖೇನ ಕನಿಷ್ಠ ಒಂದೊಂದು ಕ್ಷೇತ್ರಕ್ಕೂ ಮೂರು, ಮೂರು ಕೋಟಿ ರೂ.ಗಳ ಹಣವನ್ನು ಕೊಡಬೇಕಾಗುತ್ತದೆ. ಕೊಡದೇ ಹೋದರೆ ಕಷ್ಟವಾಗುತ್ತದೆ. ಏಕೆಂದರೆ ಕೇವಲ ಬೋರ್‌ವೆಲ್ ತೆಗೆದರೆ ಸಾಕಾಗುವುದಿಲ್ಲ, ಬೋರ್‌ವೆಲ್

ತೆಗೆಯುವುದರ ಜೊತೆಗೆ ಎಲ್ಲಿ ಬೋರ್‌ವೆಲ್ ತೆಗೆಯುತ್ತಾರೋ ಅಲ್ಲಿ ಹೊಸದಾಗಿ ಪೈಪ್‌ಲೈನ್ ಎಳೆಯಬೇಕಾಗುತ್ತದೆ. ಮತ್ತೆ ಅಲ್ಲಿ ಮೋಟಾರ್ ಇಡಬೇಕಾಗುತ್ತದೆ, ಅದಕ್ಕೆ ಎಲೆಕ್ಟ್ರಿಸಿಟಿ ಬಿಲ್ ಕಟ್ಟಬೇಕಾಗುತ್ತದೆ, ಇವೆಲ್ಲಾ ಇರುವುದರಿಂದ ಕನಿಷ್ಠ ಒಂದು ವಿಧಾನಸಭಾ ಕ್ಷೇತ್ರಕ್ಕೆ ಶಾಸಕರಿಗೆ ಮೂರು, ಮೂರು ಕೋಟಿ ರೂ.ಗಳನ್ನು ಕೊಡಿ. 157 ತಾಲ್ಲೂಕುಗಳು ಎಂದರೆ ಒಂದೈನೂರು ಕೋಟಿ ರೂ.ಗಳು ಖರ್ಚಾಗಬಹುದು. ಏಕೆಂದರೆ ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡನೆ ಮಾಡುವಾಗ, ಕೆಲವುದರಲ್ಲಿ ಖರ್ಚಾಗದಿದ್ದರೆ, ಇರುವುದನ್ನು ಬೇಕಾದರೆ ನೀವು ಕಟ್ ಮಾಡಿ, ನಾನೇನೂ ಬೇಡವೆಂದು ಹೇಳುವುದಿಲ್ಲ. ಕುಡಿಯುವ ನೀರಿಗೆ ತಾವು ಆದ್ಯತೆ ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಈಗಾಗಲೇ ಈ ವಿಚಾರದಲ್ಲಿ ನಿಯಮ 69 ರಲ್ಲಿ ಚರ್ಚೆಗೆ ತಾವು ಅವಕಾಶ ಕೊಡುತ್ತೇನೆಂದರೆ ಹೇಳಿದ್ದೀರಿ. ಆಗ ಹೆಚ್ಚು ಅಂಶಗಳನ್ನು ಈ ವಿಚಾರದಲ್ಲಿ ಹೇಳಯಸುತ್ತೇನೆ. ಇವತ್ತು ಈ ರಾಜ್ಯದಲ್ಲಿ 157 ತಾಲ್ಲೂಕುಗಳಲ್ಲಿ ನೀರಿನ ಬರಗಾಲವಿದೆ ಎನ್ನುವುದರ ಬಗ್ಗೆ ಸವಿಸ್ತಾರವಾಗಿ ಆ ಸಂದರ್ಭದಲ್ಲಿ ತಿಳಿಸುತ್ತೇನೆ. ಆದರೆ ಪೂರಕ ಬಜೆಟ್‌ನಲ್ಲಿ ತಾವು ದಯಮಾಡಿ ಕುಡಿಯುವ ನೀರಿಗೆ ಏನು ಹಣವನ್ನು ಕೊಡುತ್ತೀರಿ ಎಂಬ ಬಗ್ಗೆ ತಿಳಿಸಬೇಕೆಂದು ನಾನು ಮನವಿ ಮಾಡುತ್ತೇನೆ. ಈ ಗ್ರಾಮ ಪಂಚಾಯತ್‌ನಲ್ಲಿ ಏನಾಗಿದೆಯೆಂದರೆ ತಾಲ್ಲೂಕು ಪಂಚಾಯತಿ ಸಮಿತಿ ಇರಬಹುದು, ಗ್ರಾಮ ಪಂಚಾಯತಿ ಇರಬಹುದು, ಜಿಲ್ಲಾ ಪಂಚಾಯತಿಯಿರಬಹುದು. ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿರುವವರು ಆ ಜಿಲ್ಲೆ ಪಂಚಾಯತಿಯ ಅಧ್ಯಕ್ಷರಾಗುವುದಕ್ಕೆ ಎಷ್ಟು ಸಾಹಸ ಪಡುತ್ತಿರುತ್ತಾರೆ ಎಂಬುದು ಗೊತ್ತಿಲ್ಲ. ಕಡೇ ಪಕ್ಷ ಅವರಿಗೆ ಕನಿಷ್ಠ ಒಂದು ಕೋಟಿ ರೂ.ಗಳನ್ನು ಕೊಡಬಾರದೆ? ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿ ಇಡೀ ಜಿಲ್ಲೆಯೊಳಗೆ, ಏಕೆಂದರೆ ಕೆಲವರಿಗೆ ಶಾಸಕರ ನಿಧಿ ಇರುತ್ತದೆ ಅಥವಾ ಲೋಕಸಭಾ ಸದಸ್ಯರ ನಿಧಿ ಇರುತ್ತದೆ, ಆದರೆ ಅವರು ಖರ್ಚು ಮಾಡುವುದಕ್ಕಾಗುವುದಿಲ್ಲ, ಜಿಲ್ಲಾ ಪಂಚಾಯತಿ ಅಧ್ಯಕ್ಷ at least ಹೋದಾಗ ಆ ವಿಧಾನಸಭಾ ಕ್ಷೇತ್ರದಲ್ಲಿ ಎಂಟು ತಾಲ್ಲೂಕುಗಳಿರುತ್ತದೋ

ಅಥವಾ ಏಳು ತಾಲ್ಲೂಕುಗಳಿರುತ್ತದೋ, ಅಲ್ಲಿಗೆ ಅಧ್ಯಕ್ಷ ಹೋದಾಗ ಅಲ್ಲಿ ಒಂದ್ಯೆದು ಲಕ್ಷ ರೂ.ಗಳನ್ನು ಮಂಜೂರು ಮಾಡಿ ಎಂದು ಕೇಳಿದರೆ ಅಲ್ಲಿ ಮಂಜೂರು ಮಾಡಲು ಹಣವಿರುವುದಿಲ್ಲ. ಆದ್ದರಿಂದ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಒಂದೊಂದು ಕೋಟಿ ರೂ.ಗಳನ್ನು ಕೊಡಿ. ತಾಲ್ಲೂಕು ಪಂಚಾಯತಿ ಸಮಿತಿ ಅಧ್ಯಕ್ಷರಿಗೆ ಒಂದು ಕೋಟಿ ರೂ.ಗಳ ಹಣವನ್ನು ಕೊಡಿ. ತಾಲ್ಲೂಕು ಪಂಚಾಯತಿ ಸೇರಿದಂತೆ ಇವತ್ತು ಅಧಿಕಾರ ವಿಕೇಂದ್ರಿಕರಣ ಮಾಡಬೇಕು ಎಂದು ಕೇಂದ್ರ ಸರ್ಕಾರ ಮಾಡಿದೆ. ಆದರೆ ಜಿಲ್ಲಾ ಪಂಚಾಯತಿ ಇರಬಹುದು, ತಾಲ್ಲೂಕು ಪಂಚಾಯತಿ ಸಮಿತಿ ಇರಬಹುದು, ಗ್ರಾಮ ಪಂಚಾಯತಿಗಳಿರಬಹುದು. ಒಂದಿಪ್ಪತ್ತೈದು ಲಕ್ಷ ರೂ.ಗಳನ್ನು ಗ್ರಾಮ ಪಂಚಾಯತಿಗೆ ಕೊಡುವುದಕ್ಕೆ ನಿಮಗೇನು ತೊಂದರೆಯಿದೆ? ಅದಕ್ಕಾಗಿ ನಾನು ಹೇಳುವುದು, ಇಂಥದ್ದಕ್ಕೆಲ್ಲ ತಾವು ದಯಮಾಡಿ ಪೂರಕ ಅಂದಾಜಿನಲ್ಲಿ ಅವಕಾಶ ಮಾಡಿಕೊಡಬೇಕಾಗುತ್ತದೆ. ರೆಗ್ಯುಲರ್ ಬಜೆಟ್‌ನಲ್ಲಿಯೇ ನೀವು ಮಾಡಬೇಕಾಗಿತ್ತು. ಆದರೆ ಆಗ ಮಾಡುವುದಕ್ಕೆ ಆಗಿಲ್ಲ. ಏಕೆಂದರೆ ಈಗ ಪೂರಕ ಅಂದಾಜಿನಲ್ಲಿ ಸುಮಾರು 25 ಇಲಾಖೆಗಳು ಇವೆ. ಮತ್ತೆ ಇನ್ನೊಂದು ಪೂರಕ ಬಜೆಟ್ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಇನ್ನು ಇದರ ಜೊತೆಗೆ ರಸ್ತೆಗಳ ವಿಚಾರ ಹೇಳುವುದೇನೆಂದರೆ, ಇವತ್ತು ಗ್ರಾಮೀಣ ಪ್ರದೇಶದ ಕೆಲವು ಹಳ್ಳಿಗಳಲ್ಲಿ ನೀವು ಸುವರ್ಣಗ್ರಾಮ ಕೊಟ್ಟಿದ್ದೀರಿ, ಅದರಲ್ಲಿ ಒಂದು ತಾಲ್ಲೂಕಿಗೆ ಹತ್ತೋ, ಹದಿನೈದೋ ಹಳ್ಳಿಗಳು ಬರುತ್ತವೆ, ಕೆಲವು ಕಡೆ ಇವತ್ತು ಸುವರ್ಣ ಗ್ರಾಮಗಳನ್ನು ಕೊಡುವುದಕ್ಕೆ ಆಗದೇ ಕೆಲವು ಕಡೆ ಕಡೇಪಕ್ಷ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಸಮಿತಿ ರಸ್ತೆಗಳು, ಜಿಲ್ಲಾ ಪಂಚಾಯತಿ ರಸ್ತೆಗಳಂತು ಇವತ್ತು ನೋಡುವುದಕ್ಕಾಗುವುದಿಲ್ಲ, ಅಲ್ಲಿ ಒಂದೊಂದು ಆಳುದ್ದ ಗುಂಡಿಗಳಿವೆ, ಕೆಲವೇನಾಗಿದೆಯೆಂದರೆ ಅವುಗಳ upgradation ಆಗಿಲ್ಲ. ಅದಕ್ಕಾಗಿ ಜಿಲ್ಲಾ ಪಂಚಾಯತಿ ರಸ್ತೆಗಳಿಗೂ ನೀವು ಹಣ ಕೊಡುವುದು ಸೂಕ್ತ.

ಒಂದು ವಿಧಾನಸಭೆ ಕ್ಷೇತ್ರಕ್ಕೆ ಒಂದು ಪ್ರೋಗ್ರಾಂ ಮಾಡಿ. ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ ಒಂದು ಕ್ಷೇತ್ರಕ್ಕೆ 300 ಕೋಟಿ, 500 ಕೋಟಿ ರೂಪಾಯಿ ಕೊಡುತ್ತಾರೋ, ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಧಾನಸಭಾ ಕ್ಷೇತ್ರಗಳಲ್ಲಿ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಕೇಂದ್ರ ಸರ್ಕಾರದಿಂದ PMGSY norms ನಲ್ಲಿ ಬರುತ್ತವೆ, ಕೆಲವು ಬರುವುದಿಲ್ಲ. ಆದುದರಿಂದ ನೀವು ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುವುದು ಸೂಕ್ತವೆಂದು ಹೇಳುತ್ತೇನೆ.

ಆಶ್ರಯ ಮನೆಗಳ ಬಗ್ಗೆ ಹೇಳುವುದಾದರೆ ಈ ಮನೆಗಳಿಗೆ third party inspection ಮಾಡಬೇಕೆಂದು ಮಾಡಿದ್ದೀರಿ. ಅವರು inspection ಮಾಡಿ ಕೆಲವು ರೈತರುಗಳಿಗೆ ಆರು ತಿಂಗಳಿನಿಂದ ಒಂದು ವರ್ಷವಾದರೂ ಬಿಲ್ ಕೊಡುತ್ತಿಲ್ಲ. ಅದಕ್ಕೆ ನೀವು ತಾಲ್ಲೂಕು ಲೆವೆಲ್ ಅಧಿಕಾರಿಗಳಿಗೆ ನೀವು ಜವಾಬ್ದಾರಿ ಹಾಕಿ. Third party inspection ಏಕೆ ಹಾಕುತ್ತೀರಿ? ನಂತರ ಅವರಿಗೆ condition ಹಾಕಬೇಕು. ಕನಿಷ್ಠ ಒಂದು ಅಥವಾ ಮೂರು ತಿಂಗಳೊಳಗೆ third party inspection ಮಾಡಿ ಆಶ್ರಯ ಮನೆಗಳಿಗೆ ಬಿಲ್ ಕೊಡಬೇಕೆಂದು ಮಾಡಬೇಕಾಗುತ್ತದೆ. ಆಶ್ರಯ ಮನೆಗಳಿಗೆ 75 ಸಾವಿರ ರೂಪಾಯಿ ಎಂದು ಮಾಡಿ ಅದನ್ನು ಮೂರು ಕಂತಿನಲ್ಲಿ ಕೊಡುತ್ತೀರಿ. ಆ ಮೂರು ಕಂತುಗಳನ್ನು ತೆಗೆದುಕೊಳ್ಳಬೇಕಾದರೆ ಬಹಳ ತೊಂದರೆಯಾಗುತ್ತದೆ. ಅದಕ್ಕೆ ಒಂದು ಮಾರ್ಗಸೂಚಿಯನ್ನು ಹೊರಡಿಸಬೇಕಾಗುತ್ತದೆ. ಆಶ್ರಯ ಮನೆಯನ್ನು ಮೊದಲು foundation, ಗೋಡೆ ಮತ್ತು final ಆಗಿ roof ಈ ರೀತಿ ನಾಲ್ಕು ಹಂತದಲ್ಲಿ ಕಟ್ಟಬೇಕೆಂದು ಮಾಡಿದ್ದಾರೆ. ಯಾರು foundation ಹಾಕುತ್ತಾರೆ, ಅವರಿಗೆ 15 ದಿವಸ ಅಥವಾ ಒಂದು ತಿಂಗಳೊಳಗೆ inspection ಮಾಡಿ ಬಿಲ್ ಕೊಡಬೇಕು. ಅವರು ಬಿಲ್ ಕೊಡದೆ ಹೋದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬೇಕಾಗುತ್ತದೆ. ಕೆಲವು ಬಾರಿ ನೀವು ಕೊಟ್ಟ ಹಣವನ್ನೂ ಕೂಡ ಸರಿಯಾಗಿ ವಿನಿಯೋಗ

ಮಾಡುವುದಕ್ಕಾಗುವುದಿಲ್ಲ. ಕೆಲವು ಕಡೆ ಆಶ್ರಯ ಮನೆಗಳಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೀರಿ. ಅದನ್ನು ಉಪಯೋಗ ಮಾಡಬೇಕು. ಅದೇ ರೀತಿ ನಗರ ಪ್ರದೇಶಗಳಲ್ಲಿನ ಆಶ್ರಯ ಮನೆಗಳಿಗೆ 75,000 ರೂಪಾಯಿ ಏನು ಕೊಡುತ್ತಿದ್ದೀರಿ, ಅದು ಸಾಕಾಗುವುದಿಲ್ಲ. ಅದಕ್ಕೆ ನಗರಪ್ರದೇಶದಲ್ಲಿರುವ ಆಶ್ರಯ ಮನೆಗಳಿಗೆ ಕನಿಷ್ಠ 2 ಲಕ್ಷ ರೂಪಾಯಿಗಳನ್ನು ಕೊಡುವುದು ಸೂಕ್ತವೆಂದು ಹೇಳುತ್ತೇನೆ. ಏಕೆಂದರೆ ಅವರಿಗೆ ನಗರಪ್ರದೇಶಗಳಲ್ಲಿ ಯಾವುದೇ ಜಮೀನು ಇರುವುದಿಲ್ಲ. ಅಲ್ಲಿರುವವರು ಕೂಲಿ ಮಾಡಿಕೊಂಡು ಜೀವನ ಮಾಡುವಂತಹ ಬಡವರಿರುತ್ತಾರೆ. ಅದಕ್ಕೆ ಕನಿಷ್ಠ ಎರಡು ಲಕ್ಷ ರೂಪಾಯಿಗಳನ್ನಾದರೂ ಕೊಡುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಇನ್ನು ಮೂರು ತಿಂಗಳು ಮುಖ್ಯ ಮಂತ್ರಿಗಳಾಗಿರುತ್ತಾರೆ. ಅದಕ್ಕೋಸ್ಕರ ಅಷ್ಟರೊಳಗೆ ನೀವು announce ಮಾಡಿ, ಏಕೆಂದರೆ ನಗರ ಪ್ರದೇಶದವರೇ ನಿಮಗೆ ಓಟು ಕೊಡುವುದು. ಅದರಿಂದ ನಿಮಗೆ ಒಳ್ಳೆಯ ಹೆಸರು ಬರಲಿ. ನೀವು ನಗರ ಪ್ರದೇಶದ ಆಶ್ರಯ ಮನೆಗಳಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಬೇಕು. ಇದಕ್ಕೆ ಕೇಂದ್ರ ಸರ್ಕಾರದವರು matching grant ಕೊಡುತ್ತಾರೆ, ಇಲ್ಲದಿದ್ದರೆ ನೀವು ಕೇಂದ್ರ ಸರ್ಕಾರಕ್ಕೆ approach ಮಾಡಿ. ಅದಕ್ಕೆ ಯಾರನ್ನಾದರೂ ಜವಾಬ್ದಾರಿ ಹಾಕಿ. ಕೇಂದ್ರ ಸರ್ಕಾರದವರು ಇವತ್ತು ಕೋಟ್ಯಾಂತರ ರೂಪಾಯಿ ಹಣವನ್ನು ಕೊಡುತ್ತಿದ್ದಾರೆ.

ಸಹಕಾರ ಇಲಾಖೆ ಸಂಬಂಧಪಟ್ಟಂತೆ ಹೇಳುವುದಾದರೆ ನೀವು ಸಾಲ ಮನ್ನಾ ಎಂದು ಘೋಷಣೆ ಮಾಡಿ. ನಾನು ಕಳೆದ ಬಾರಿ ತಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದೆ. ನೀವು ಒಂದು ಲಕ್ಷ ರೂಪಾಯಿಗೆ zero percent ಮಾಡಿದ್ದೀರಿ. ಒಂದು ಲಕ್ಷ ಮೇಲೆ ಯಾವ ರೈತರ ಸಾಲ ತೆಗೆದುಕೊಳ್ಳುತಾನೆ ಅದಕ್ಕೆ 4% ಅಥವಾ 5% ಮಾಡಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ರೈತ ಮೂರು ಲಕ್ಷ ಸಾಲ ತೆಗೆದುಕೊಂಡರೆ ಅದರಲ್ಲಿ ಒಂದು ಲಕ್ಷ ರೂಪಾಯಿಗೆ 0% ಬಡ್ಡಿಯಂತೆ ಕೊಟ್ಟು ಬಾಕಿ ಉಳಿದಂತಹ ಹಣಕ್ಕೆ 4%, 5%,

6% ಎಂದು ಮಾಡಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಈಗ ಏನಾಗುತ್ತದೆ ಎಂದರೆ ರೈತ ಮೂರು ಲಕ್ಷ ರೂಪಾಯಿ ಸಾಲ ತೆಗೆದು ಕೊಂಡರೆ ಆ ಮೂರು ಲಕ್ಷ ರೂಪಾಯಿಗೆ ಕೂಡ 4%, 5%, 6% ಎಂದು ಮಾಡಿದ್ದೀರಿ. ಮುಂದಿನ ದಿನಗಳಲ್ಲಿ ಉಳುವುದಕ್ಕೆ ರೈತರ್ಯಾರೂ ಸಿಗುವುದಿಲ್ಲ, ಆ ಪರಿಸ್ಥಿತಿಯಾಗುತ್ತದೆ. ನೀವು ಅವರಿಗೆ encourage ಮಾಡಬೇಕೆಂದರೆ ಅವರು ಜಾಸ್ತಿ ಸಾಲ ತೆಗೆದುಕೊಂಡಿದ್ದರೆ ಒಂದು ಲಕ್ಷ ರೂಪಾಯಿಯವರೆಗೂ 0% ನಂತೆ ಕೊಡಿ, ಉಳಿದಿರುವುದಕ್ಕೆ 4% ಹಾಕಿ.

ಕಬ್ಬಿನ ವಿಚಾರದ ಬಗ್ಗೆ ಹೇಳುವುದಾದರೆ ಮಂಡ್ಯ, ಹಾಸನ ಕಬ್ಬಿನ ಬೆಳೆಗಾರರು representation ಕೊಟ್ಟಿದ್ದಾರೆ. ದಿನಾಂಕ: 01.04.2011ರಿಂದ ದಿನಾಂಕ: 01.04.2012 ರವರೆಗೆ ಯಾರದ್ದು ರೂ.25,000 ಸಾಲ ಇದೆ, ಅದನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು ಮತ್ತು ಮೂರು ತಿಂಗಳು last date ಜಾಸ್ತಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ ಸಹಕಾರ ಇಲಾಖೆಯಲ್ಲಿ VSSNL ಮುಖೇನ ಸಾಲವನ್ನು ದಿನಾಂಕ: 01.04.2011 ರಿಂದ ತೆಗೆದುಕೊಳ್ಳುವುದು. ಅದನ್ನು ನೀವು ದಿ: 01.08.2011 ರಿಂದ ಮಾಡಿದ್ದೀರಿ. ಹಾಗಾಗಿ ಅದನ್ನು ನಾಲ್ಕು ತಿಂಗಳು ಮುಂದೂಡಿ ಸಹಕಾರಿ ಸಾಲವನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ಹೊಸ ಸಾಲಗಳನ್ನು ಕೊಡಬೇಕು. ಕೆಲವರಿಗೆ VSSNLನಲ್ಲಿ ಕಾರ್ಯದರ್ಶಿಗಳು ಸೇರಿಕೊಂಡು ಹಳೆ ಸಾಲಗಳನ್ನು ದುಡ್ಡು ಹೊಡೆಯುವುದಕ್ಕೆ rennewal ಮಾಡಿಕೊಡುತ್ತಾರೆ, ಅದಕ್ಕೆ ಕಡಿವಾಣ ಹಾಕಿ. ನೀವು ಹೊಸ ಸಾಲಗಳನ್ನು ಕೊಡಿ.

ಕರ್ನಾಟಕ ಹಾಲು ಮಹಾಮಂಡಳಿ ಇಡೀ ರಾಷ್ಟ್ರದಲ್ಲಿ ಎರಡನೇ ಸ್ಥಾನದಲ್ಲಿದೆ. ಇವತ್ತು ರೈತರಿಗೆ 300 ಕೋಟಿ ರೂಪಾಯಿ ಬಟವಾಡೆ ಕೊಡುವುದು ಬಾಕಿ ಇದೆ. ಸುಮಾರು 19,000 ಟನ್ SMP powder ಮಾರಾಟ ಮಾಡದಿರುವುದರಿಂದ ಇವತ್ತು 13 ಒಕ್ಕೂಟದಲ್ಲಿ ಹಾಗೆ ಬಿದ್ದಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಕಾಳಜಿ ವಹಸಿಬೇಕಾಗುತ್ತದೆ.

ಆರೇಳು ವಾರದಿಂದ ರೈತರಿಗೆ ಬಟವಾಡೆ ಕೊಟ್ಟಿಲ್ಲ. 6,000 ಟನ್ ಬೆಣ್ಣೆ ಹಾಗೆ ಬಿದ್ದಿದೆ. ಒಂದು ಕೆ.ಜಿ. 180 ರೂಪಾಯಿ ಇರುವಂತಹ SMP powder ಇವತ್ತು ಕೇವಲ 120 ರೂಪಾಯಿ ಇದೆ. ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರ ಪ್ರಶ್ನೆಗೆ ಆಮೇಲೆ ಅವಕಾಶ ಕೊಡುತ್ತೇನೆ ಎಂದು ಹೇಳುತ್ತಾರೆ. ಇವತ್ತು ಅವಕಾಶ ಕೊಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಯಮಾಡಿ ಹಾಲು ಉತ್ಪಾದಕರಿಗೆ ಸರ್ಕಾರದಿಂದ ಕೊಟ್ಟುಬಿಡಿ. ಆಮೇಲೆ ಬೇಕಾದರೆ powder ರನ್ನು ಕರ್ನಾಟಕ ಹಾಲು ಮಹಾಮಂಡಲಿಯಿಂದ ಮಾರುತ್ತರರೋ ಬಿಡುತ್ತಾರೋ, ಲಾಸ್ ಆಗುತ್ತದೋ ಅದು ಬೇರೆ ವಿಷಯ. ಇವತ್ತು ರೈತರು ಬೆಳಿಗ್ಗೆ ಎದ್ದು ಹಾಲು ಹಾಕಿಬಿಟ್ಟು ಉಪ್ಪು ಎಣ್ಣೆ ಖರ್ಚಿಗೆ ನೋಡಿಕೊಳ್ಳಬೇಕು. ಇವತ್ತು 20 ಕೋಟಿಯಿಂದ 50 ಕೋಟಿ ರೂಪಾಯಿಯವರಿಗೆ ರೈತರಿಗೆ ದುಡ್ಡು ಕೊಡಬೇಕಾಗಿದೆ. ನೀವು ಯಾವ ರೀತಿ ಮಾಡುತ್ತೀರೋ ಗೊತ್ತಿಲ್ಲ. ದಯಮಾಡಿ ಅದನ್ನು ಕೊಡಬೇಕು, ಅದಕ್ಕೆ ನೀವು ಪೂರಕ ಅಂದಾಜಿನಲ್ಲಿ provision ಮಾಡಿ. ಇಲ್ಲದಿದ್ದರೆ ಹಾಲು ಉತ್ಪಾದಕರು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ.

ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಗ್ರಾಮೀಣ ಪ್ರದೇಶದ ರಸ್ತೆಗಳಿಗೆ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. 75 ಲಕ್ಷ ರೂಪಾಯಿ ಸಾಕಾಗುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಕನಿಷ್ಠ 400 ರಿಂದ 500 ಹಳ್ಳಿಗಳಿವೆ. ಅದರಲ್ಲಿ 250 ಕಾಲೋನಿಗಳು ಬರುತ್ತವೆ. ಇದೇ ರೀತಿ ಹೋದರೆ ರಸ್ತೆಗಳನ್ನು ಮಾಡಲು ಇನ್ನು 25 ವರ್ಷ ಬೇಕು. 50 ವರ್ಷಗಳಾದರೂ ಕೆಲವು ಕಾಲೋನಿಗಳಲ್ಲಿ ರಸ್ತೆ ಮಾಡುವುದಕ್ಕೆ ಆಗಿಲ್ಲ. ಸಮಾಜ ಕಲ್ಯಾಣ ಇಲಾಖೆ ಕೆಲವು funds ಅನ್ನು ಬೇರೆ ಬೇರೆ ಕೆಲಸಗಳಿಗೆ ಉಪಯೋಗಿಸುತ್ತೀರಿ. ಈ ಹಣವನ್ನು ತೆಗೆದುಕೊಂಡು ಹೋಗಿ National highway or State highwayಗೆ percentage ಹಾಕಿಬಿಟ್ಟು ಆ ಹಣದಲ್ಲಿ ಮಾಡುತ್ತೀರಿ. ಅದನ್ನು ದಯಮಾಡಿ ತೆಗೆದುಹಾಕಿ. ನೀವು ಈ ಹಣವನ್ನು

pool ಮಾಡುವಾಗ ದಯಮಾಡಿ ಎಲ್ಲಿ ಕಾಲೋನಿಗಳು ಇವೆ, ಅಲ್ಲಿಗೆ ಕೊಡಿ. ಕನಿಷ್ಠ ಒಂದೆ ವಿಧಾನಸಭಾ ಕ್ಷೇತ್ರಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕು. ಆದರೆ ನೀವು ಒಂದು ಕ್ಷೇತ್ರಕ್ಕೆ ಕೇವಲ 75 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಅದು ಸಾಕಾಗುವುದಿಲ್ಲ.

ಇನ್ನು ಸಾಲದ ಬಗ್ಗೆ ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಏನು ಸಾಲವನ್ನು ಕೊಡುತ್ತಾರೆ, ಸಾಲ ಎಷ್ಟು ಇದೆಯೋ ಅಷ್ಟೇ ಬಡ್ಡಿ ಆಗಿದೆ. ಬ್ಯಾಂಕ್‌ಗಳಲ್ಲಿ ಕಲ್ಲು ಒಡೆಯುವವರು ಮತ್ತು ಗುಡಿ ಕೈಗಾರಿಕೆ ಮಾಡುವವರು ಎಸ್‌ಸಿ/ಎಸ್‌ಟಿ ಜನಾಂಗದವರು ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ 20–25 ಸಾವಿರ ರೂಪಾಯಿ ಸಾಲ ಪಡೆದುಕೊಂಡಿರುತ್ತಾರೆ. ಅವರಿಗೆ ಕಟ್ಟುವುದಕ್ಕೆ ಆಗುವುದಿಲ್ಲ, ಅವರಿಗೆ ಒಂದು ಬಾರಿ ಸಾಲ ಮನ್ನಾ ಮಾಡುವುದು ಸೂಕ್ತ ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಈ ವರ್ಷ ಅಂಗನವಾಡಿ ಕಟ್ಟಡಗಳಿಗೆ ಯಾವ ಊರಿಗೂ ನೀವು provision ಕೊಟ್ಟಿಲ್ಲ. ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಿದ್ದಾರೆ, ಈಗ ಇದಕ್ಕೆ ಯಾರು ಮಂತ್ರಿಗಳಿದ್ದಾರೆ ಗೊತ್ತಿಲ್ಲ. ಆದರೆ ದಯಮಾಡಿ ಒಂದು ವಿಧಾನಸಭೆ ಕ್ಷೇತ್ರದಲ್ಲಿ ಹತ್ತತ್ತು ಅಂಗನವಾಡಿ ಕಟ್ಟಿಸಿಕೊಡಿ. ಅದಕ್ಕೆ ತೊಂದರೆ ಏನಾದರೂ ಇದೆಯಾ? ಇಲ್ಲವೆಂದರೆ ನಬಾರ್ಡ್‌ನಲ್ಲಾದರೂ ದುಡ್ಡು ತೆಗೆದುಕೊಂಡು ಕಟ್ಟಿಸಿ. ಅಂಗನವಾಡಿ ಕಟ್ಟಡಗಳು ಇಲ್ಲದೆ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಬಾರೀ ತೊಂದರೆಯಾಗಿದೆ. ಇಲ್ಲಿ ಪ್ರಾಥಮಿಕ ಶಿಕ್ಷಣ ಸಚಿವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಒಂದನೇ ತರಗತಿಯಿಂದ ಏಳನೇ ತರಗತಿಯವರೆಗಿನ ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಿ ಕುಸಿದು ಹೋಗುತ್ತಿದೆ. ಅದನ್ನು ತಡೆಯದೆ ಹೋದರೆ ಕಷ್ಟ. ಈಗಾಗಲೇ 2,500 ಶಾಲೆಗಳನ್ನು ಮುಚ್ಚಿದ್ದೀರಲ್ಲ. ಹಿಂದಿನ ಕಾಲದಲ್ಲಿ ಹಿರೀಕರು ಯಾರ್ಯಾರ ಮನೆಗಳಿಗೆ ತಿರುಗಿ ಶಾಲೆಗಳನ್ನು ಮಂಜೂರು ಮಾಡಿಸಿರುತ್ತಾರೆ. ಅದಕ್ಕೆ ಏನು ಮಾಡಬೇಕೆನ್ನುವುದರ ಬಗ್ಗೆ ನೀವು

ಬುದ್ಧಿಜೀವಿಗಳನ್ನು ಮತ್ತು ಸಾಹಿತಿಗಳನ್ನು ಇಟ್ಟುಕೊಂಡು ಚಿಂತನೆ ಮಾಡಿ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿದ್ಯಾಭ್ಯಾಸವನ್ನು ಕಲ್ಪಿಸುವುದಕ್ಕೆ ಚಿಂತನೆ ಮಾಡಿ. ಇವತ್ತು ಮಾಧ್ಯಮಿಕ ಶಾಲೆಯನ್ನು ಕೂಡ ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಇವತ್ತು ಇದೇ ರೀತಿ ಹೋದರೆ ಸಂಪೂರ್ಣವಾಗಿ ಇರುವಂತಹ ಸರ್ಕಾರಿ ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೆ ಸರ್ಕಾರ ಈಗಿನಿಂದಲೇ ಅಡಿಪಾಯ ಹಾಕಬೇಕು. ಇಲ್ಲದೆ ಹೋದರೆ ಕಾಗೇರಿ ಕಾಲದಲ್ಲಿ 2,500 ಶಾಲೆಗಳನ್ನು ಮುಚ್ಚಿದರು ಎಂದು ಪ್ರಶಸ್ತಿ ಕೊಡಬೇಕಾಗುತ್ತದೆ. ಅದಕ್ಕೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಅವಕಾಶ ಕೊಡಬಾರದು. ನೀವು ಸಾಹಿತಿಗಳನ್ನು, ಬುದ್ಧಿಜೀವಿಗಳನ್ನು ಹಾಗೂ ಕನ್ನಡ ಸಂಘಟನೆಗಳನ್ನು ಕರೆಸಿ ಚಿಂತನೆ ಮಾಡಿ. ಹಳ್ಳಿಯವರು ಓದಬಾರದು ಎಂದು ಎಲ್ಲಿದೆ? ಅವರಿಗೆ ಗುಣಮಟ್ಟದ ಶಿಕ್ಷಣ ಕೊಡಬೇಕೆಂದು ಸರ್ಕಾರದ ಗಮನಕ್ಕೆ ತರುತ್ತೇನೆ. ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಇದು ಯಾರಿಗೆ ಇದೆಯೆಂಬುದು ಗೊತ್ತಿಲ್ಲ. ಜಿಲ್ಲಾ ಮಟ್ಟದಲ್ಲಿ ವಾರ್ತಾ ಇಲಾಖೆ ಇದೆ. ಆ ವಾರ್ತಾ ಇಲಾಖೆಯಲ್ಲಿ ಏನಾದರೂ advertisement ಕೊಡುವುದಕ್ಕೆ ಮಂತ್ರಿಗಳಿಗೆ ಹೇಳಿದರೆ, ಮಾನ್ಯ ಶಾಸಕರುಗಳು ಕಾರ್ಯಕ್ರಮಗಳನ್ನು ಮಾಡುವುದಕ್ಕೆ advertisement ಕೊಡಿ, ಶಾಸಕರೇನು ಯಾವುದೇ ಕಾರ್ಯಕ್ರಮಗಳನ್ನು ಮಾಡಬಾರದು ಎಂದು ಏನಾದರೂ ಇದೆಯೇ? ಶಾಸಕರು ಮಾಡುವ ಕಾರ್ಯಕ್ರಮಕ್ಕೆ ವಾರ್ತಾ ಇಲಾಖೆಗೆ ಹೋಗಬಾರದು ಎಂದು ಇದೆಯೇ? ಈ ಬಗ್ಗೆ ತಾವು ಕಟ್ಟುನಿಟ್ಟಾದ ಸೂಚನೆಗಳನ್ನು ಕೊಡಬೇಕಾಗುತ್ತದೆ. ಯಾರು ವಾರ್ತಾ ಇಲಾಖೆಯ ಅಧಿಕಾರಿಗಳಿದ್ದಾರೆ, ಯಾವುದೇ ಸರ್ಕಾರಿ ಕಾರ್ಯಕ್ರಮ ಇದ್ದರೆ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಭಾಗವಹಿಸಲೇ ಬೇಕು ಎಂದು ಸರ್ಕಾರದಿಂದ ಒಂದು ಸುತ್ತೋಲೆಯನ್ನು ಕಳುಹಿಸಬೇಕಾಗುತ್ತದೆ. ನೀವು supplementary Budaget ನಲ್ಲಿ ನೀವು ಅದನ್ನೂ ಹಾಕಿದ್ದೀರಿ. ಯಾವ ಉದ್ದೇಶಕ್ಕೋಸ್ಕರ ನೀವು ವಾರ್ತಾ ಇಲಾಖೆಯನ್ನು ಮಾಡಿದ್ದೀರಿ? ಶಾಸಕರಿಗೆ ವಿಧಾನಸಭಾ ಕ್ಷೇತ್ರದಲ್ಲಿ

ಕೆಲಸವಾಗಬೇಕು. ನಾವೇನಾದರೂ pamphlets ಮಾಡಿ ಹಂಚಬೇಕೆಂದು ಇದ್ದರೆ ಹೇಳಿ, ಅದನ್ನು ನಾವು ಮಾಡಿಕೊಳ್ಳುತ್ತೇವೆ. ಶಾಸಕರ ನಿಧಿಯಲ್ಲಿ ಅದಕ್ಕೆ ಒಂದು provision ಮಾಡಿ ಬಿಡಿ. ಶಾಸಕರ ನಿಧಿಯಲ್ಲಿ advertisement ಗೆ ಅವಕಾಶ ಕೊಡಿ ಎಂದರೆ ಅದನ್ನು ಕೊಟ್ಟು ಬಿಡುತ್ತೇವೆ. ಬರೀ ಸರ್ಕಾರದ್ದು ಹಾಗೂ ಮಂತ್ರಿಗಳ ಹೆಸರು ಹಾಕಿ advertisement ಕೊಡುವುದಲ್ಲ. ಆ ಕ್ಷೇತ್ರದಲ್ಲಿ ಶಾಸಕರು ಯಾರು ಕೆಲಸ ಮಾಡಿರುತ್ತಾರೆ. ತಾವು ಕೆಲವು ಕಡೆ ಕೋಟ್ಯಾಂತರ ರೂಪಾಯಿ ಇವತ್ತು ಜಾಹಿರಾತಿಗಾಗಿ ಖರ್ಚು ಮಾಡುತ್ತಿದ್ದೇವೆ. ಶಾಸಕರು ಅವರ ವಿಧಾನಸಭಾ ಕ್ಷೇತ್ರಗಳಲ್ಲಿ ಮಾಡಿರುವ ಕೆಲಸಗಳು ಏನು ಮಾಡಿರುತ್ತಾರೆ. ನಿಮ್ಮ ಸರ್ಕಾರದ್ದೇ ಹಾಕಿಕೊಳ್ಳಿ, ಇಂಥ ಶಾಸಕರು ಇದ್ದರು, ಇವರ ಕಾಲದಲ್ಲಿ ಇಷ್ಟು ಕೆಲಸವಾಗಿದೆ. ಆಗ ಯಾವ್ಯಾವ ಶಾಸಕರಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆಂಬುದು ಬರಲಿ, ಅದಾದರೂ ಗಮನಕ್ಕೆ ಬರುತ್ತದೆ. ವಾರ್ತಾ ಇಲಾಖೆ ಏನಾಗಿದೆಯೆಂದರೆ, ಈ ಇಲಾಖೆ ಬರೀ ಸರ್ಕಾರದ್ದು, ಮಂತ್ರಿಗಳ ಜಾಹಿರಾತು ಕೊಡುವುದಕ್ಕೆ ಇರಬಾರದು. ದಯಮಾಡಿ ತಾವು ಶಾಸಕರ ಪರವಾಗಿ ಬರಬೇಕಾಗುತ್ತದೆ, ಅವರ ರಕ್ಷಣೆಗೆ ಮತ್ತು ಅವರು ಅಭಿವೃದ್ಧಿ ಕೆಲಸ ಏನು ಮಾಡಿದ್ದಾರೆಂದು ಗೊತ್ತಾಗಬೇಕು. ಜನರು ಏನು ಹೇಳುತ್ತಾರೆ, ಈ ಶಾಸಕರು ಏನೂ ಕೆಲಸ ಮಾಡಿಲ್ಲ ಎಂದು ಅಂದುಕೊಳ್ಳುತ್ತಾರೆ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕೋ, ಬೇಡವೋ? ಇಲ್ಲಿ ತಾವು 29 ಇಲಾಖೆಗಳನ್ನು ಇದರಲ್ಲಿ ಸೇರಿಸಿ, 'ಆಯಿತು ಕುಳಿತುಕೊಳ್ಳಿ' ಎಂದು ಹೇಳಿದರೆ ಹೇಗೆ? ದಯಮಾಡಿ ನನಗೆ ಮಾತನಾಡಲು ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆ, ಈ ಇಲಾಖೆಯ ಮಂತ್ರಿಗಳು ಬಂದಿಲ್ಲ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆ ದಿವಸ ಕೃಷ್ಣ ಬೇಸಿನ್ ಬಗ್ಗೆ ಮಾತನಾಡಿದರು. ಅದರ ಬಗ್ಗೆ ನನ್ನ ವಿರೋಧವಿಲ್ಲ. ಹಿಂದಿನ ಕಾಲದಿಂದ ಏನೇನಾಗಿದೆ ಎಂಬುದನ್ನೆಲ್ಲಾ

ಎಳೆಎಳೆಯಾಗಿ ಬಿಡಿಸಿ ವಿವರವಾಗಿ ಹೇಳಿದ್ದಾರೆ. ಆದರೆ ಒಂದು ವಿಷಯ ಹೇಳುವುದೇನೆಂದರೆ, ಎಲ್ಲಾ ಭಾಗಗಳಲ್ಲೂ ಮಾಡಲಿ, ಕಾವೇರಿ ಬೇಸಿನ್‌ಗೆ ಹಣ ಕೊಡುವುದಕ್ಕೆ ಏಕೆ ನೀವು ಹಿಂದೇಟು ಹಾಕುತ್ತೀರಿ? ಅದಕ್ಕೂ ಹಣ ಕೊಟ್ಟು ಆ ಯೋಜನೆಗಳನ್ನು ಮುಗಿಸಿ. ಇದಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕು? 1924 ರಿಂದ ಇಲ್ಲಿಯವರೆಗೆ ಹೊಡೆದಾಡುವ ಪರಿಸ್ಥಿತಿ ಬಂದಿದೆ. ಅವತ್ತಿನಿಂದಲೂ ಕಾವೇರಿ ಬೇಸಿನ್‌ಗೆ ಸರಿಯಾದ ರೀತಿಯಲ್ಲಿ ಹಣ ಕೊಟ್ಟು ವಿನಿಯೋಗ ಮಾಡಿದ್ದರೆ ಇವತ್ತು ಹೊಡೆದಾಡುವ ಪರಿಸ್ಥಿತಿ ಇರುತ್ತಿತ್ತೆ? 200 ವರ್ಷಗಳು ಕಳೆದರೂ ಕಾವೇರಿ ಬೇಸಿನ್ ಯೋಜನೆಗಳನ್ನು ಮುಗಿಸುವುದಿಲ್ಲವೆಂದರೆ ಏನು ಅರ್ಥ? ಇವತ್ತು ತಾವು ಕೆಲವು ಕಡೆ ಅಂಕಿ ಅಂಶಗಳನ್ನು ಕೊಟ್ಟು ನೀರಾವರಿಗೆ ಆಗುತ್ತಿದೆಯೆಂದು ತೋರಿಸಿದ್ದೀರಿ. ಕೆಲವು ಕಡೆ ನಾಲೆಗಳಲ್ಲಿ ನೀರೇ ಹರಿಯುತ್ತಿಲ್ಲ. ಕೆ.ಆರ್. ಪೇಟೆ ತಾಲ್ಲೂಕು ಇರಬಹುದು, ಮಂಡ್ಯ ಇರಬಹುದು, ನಾಗಮಂಗಲ ಇರಬಹುದು, ಸುಮ್ಮನೆ ಲೆಕ್ಕಕ್ಕೆ 10 ಲಕ್ಷ ಎಕರೆ ಅಚ್ಚುಕಟ್ಟು ಎಂದು ಹೇಳಿ ನೀರಾವರಿ ಇಲಾಖೆಯವರು ಹೇಳುತ್ತಾರೆ. ಹೊರತು, ಕೆಲವು ಕಡೆ ನಾಲೆಗಳಲ್ಲಿ ನೀರೇ ಹೋಗುವುದಿಲ್ಲ. ಈ ರೀತಿ ಆಗಬಾರದು. ಕಾವೇರಿ ಬೇಸಿನ್ ಇರಬಹುದು, ಕೃಷ್ಣ ಬೇಸಿನ್ ಇರಬಹುದು, ಇವುಗಳಿಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಹೇಳಿದ ಹಾಗೆ ಕನಿಷ್ಠ 30%, 35% ರಿಂದ 40% ಹಣ ತೆಗೆದು ಇಡಿ. ಇವತ್ತು ಹಣ ತೆಗೆದಿಟ್ಟು ನೀರಾವರಿಗೆ ಆದ್ಯತೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. 1964ರಲ್ಲಿ ಕೃಷ್ಣ ಯೋಜನೆಗೆ ಅಡಿಗಲ್ಲು ಹಾಕಿ 20 ವರ್ಷ ಕಳೆದರೂ 16 ಲಕ್ಷ ಎಕರೆಗೆ, 4,25,000 ರೂ.ಗಳನ್ನು ಕೊಟ್ಟು, ನೀರಾವರಿ ಮಾಡಿದ್ದೀರಿ ಎಂದು ಮಾಹಿತಿ ಇದೆ. ಇದನ್ನು ಮಾಡುವುದಕ್ಕೆ 50 ವರ್ಷಗಳು ಬೇಕಾ? 48 ವರ್ಷಗಳು ಕಳೆದರೂ ಮಾಡಿಲ್ಲ. ಆದ್ದರಿಂದ ನೀರಾವರಿಗೆ ದಯಮಾಡಿ ಕನಿಷ್ಠ ಶೇಕಡ 1 ಲಕ್ಷ ಬಜೆಟ್ ಮಾಡಿದರೆ, 40 ಲಕ್ಷ ಕೋಟಿ ರೂ.ಗಳನ್ನು ನೀರಾವರಿಗೆ ಇಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ಆಹಾರ ಸಚಿವರು ಇಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಕೆಲವು ಕಡೆ ಹಸಿರು ಕಾರ್ಡುಗಳನ್ನು ಕೊಡುತ್ತಿಲ್ಲ.

ದಯಮಾಡಿ ಹಸಿರು ಕಾರ್ಡು ಇರಬಹುದು, old-age pension ಇರಬಹುದು, widow pension ಇರಬಹುದು, ಕೆಲವು ಕಡೆ ಆರು ತಿಂಗಳು ಒಂದು ವರ್ಷ ಕಳೆದರೂ widow pension ಬಂದಿಲ್ಲ. ನಾನು ಇಲ್ಲಿ ಹೇಳಿದ ತಕ್ಷಣ ಆಹಾರ ಸಚಿವರು ಹೇಳಿದರೆ, ಹೇಳಿಕೊಳ್ಳಲಿ ಬಿಡು ಎಂದು ಜಾಗ ಖಾಲಿ ಮಾಡಿ ಹೊರಟು ಹೋದರು. ಇವರು ಶೃಂಗೇರಿಯಲ್ಲಿ ಒಂದು ಕಡೆ ಕೊಟ್ಟರೆ ಸಾಲದು. ರಾಜ್ಯದಲ್ಲಿ ಎಲ್ಲಾ ಕಡೆ ಕೊಡಬೇಕು. ಇವತ್ತು 157 ತಾಲ್ಲೂಕುಗಳಲ್ಲಿ ಬರಗಾಲ ಇದೆ. ಇಂತಹ ಸಂದರ್ಭದಲ್ಲಿ ಕೊನೇ ಪಕ್ಷ ನ್ಯಾಯ ಬೆಲೆ ಅಂಗಡಿಗಳಿಗೆ ಸರಿಯಾಗಿ ಅಕ್ಕಿ ಹೋಗುವ ಹಾಗೆ ಮಾಡಿ. ನ್ಯಾಯ ಬೆಲೆ ಅಂಗಡಿಗಳಲ್ಲಿ ಏನಾಗಿದೆ ಎಂದರೆ, ಎಲ್ಲೂ ರಸೀತಿ ಕೊಡುತ್ತಿಲ್ಲ. 25 ಕೆ.ಜಿ. ಅಕ್ಕಿ ಹಾಗೂ 10 ಕೆ.ಜಿ ಗೋಧಿ ಕೊಡಬಹುದು. ಅವರು ರಸೀದಿ ಕೊಡುತ್ತಾರಾ ಕೇಳಿ. ನಿಮ್ಮ food inspector ಗಳು ಮಾಮೂಲಿ ದುಡ್ಡು ತೆಗೆದುಕೊಳ್ಳುತ್ತಾರೆ, ಐದು ಕೆ.ಜಿ. ಅಕ್ಕಿ .ಕೊಟ್ಟು ಹೊಟ್ಟೆಗೆ ಹಿಟ್ಟು ಇಲ್ಲದೇ ಇರುವವರ ಕೈಯಲ್ಲಿ ಸಹಿ ಹಾಕಿಸಿಕೊಳ್ಳುತ್ತಾರೆ. ಇವರು ರಸೀದಿಯನ್ನು ಕೊಡಬೇಕು, ಮತ್ತೆ ಯಾರು ಫಲಾನುಭವಿಗಳು ಇರುತ್ತಾರೆ ಅವರ ಕೈಯಲ್ಲಿ ರಸೀದಿಗೆ ಸಹಿ ಹಾಕಿಸಿಕೊಳ್ಳಬೇಕು, ಮತ್ತೆ ಯಾರು ಫಲಾನುಭವಿಗಳು ಇರುತ್ತಾರೆ ಅವರ ಕೈಯಲ್ಲಿ ರಸೀದಿಗೆ ಸಹಿ ಹಾಕಿಸಿಕೊಳ್ಳಬೇಕು.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣರವರ ಕಳಕಳಿ ನಾನು ಮೆಚ್ಚಿದ್ದೇನೆ ಮತ್ತು ಸರಿ ಇದೆ. ಆದರೆ ಅವರಿಗೆ ಇತ್ತೀಚಿನ ದಿನಗಳ ವಾಸ್ತವಿಕತೆ ಗೊತ್ತಿಲ್ಲ. ಅವರ ಜಿಲ್ಲೆಗೆ ಹೋಗಿ ಅವರ ಜಿಲ್ಲೆಯ ಅಧಿಕಾರಿಗಳ ಜೊತೆ ಮಾತನಾಡಿ ಬಂದಿದ್ದೇನೆ. ಎಲ್ಲಾ ಕಡೆ ಅಕ್ಕಿ, ಸೀಮೆ ಎಣ್ಣೆ ಹಾಗೂ ಸಕ್ಕರೆಯನ್ನು ವ್ಯವಸ್ಥಿತವಾದ ರೀತಿಯಲ್ಲಿ ಕೊಟ್ಟಿದ್ದೇವೆ. ಯಾವ ಕಡೆಗಳಲ್ಲೂ ಕೊಟ್ಟಿಲ್ಲವೆಂದು ಇಲ್ಲ. ಅವರು ಬಿಲ್ ಬಗ್ಗೆ ಏನು ಹೇಳುತ್ತಿದ್ದಾರೆ ಅದು ಸರಿ ಇದೆ. ಬಿಲ್ ಕೊಡುತ್ತಿಲ್ಲ ಎನ್ನುವಂತಹ ಆರೋಪಸತ್ಯ. ಆ ಬಿಲ್ ಕೊಡುತ್ತಿಲ್ಲ ಎನ್ನುವ ಕಾರಣಕ್ಕಾಗಿ ನಾವು ಈಗ point of sale ಎನ್ನುವಂತಹ ಹೊಸ ಮೆಷಿನ್ ತಂದಿದ್ದೇವೆ. ತುಮಕೂರಿನಲ್ಲಿ ಅದನ್ನು ಪ್ರಾಯೋಗಿಕವಾಗಿ

ಹಾಕಿದ್ದೇವೆ. ಈಗ ಇನ್ನೂ ಐದು ಜಿಲ್ಲೆಗಳಿಗೆ 15 ದಿನಗಳೊಳಗಾಗಿ ಹಾಕುತ್ತಿದ್ದೇವೆ. ಆ ಮೆಷಿನ್ ಎಷ್ಟು ತೂಕ ಆಗುತ್ತದೆ ಎಂದು ಅದು voice ನಲ್ಲಿಯೂ ಹೇಳುತ್ತದೆ, ಮತ್ತು ಬಿಲ್ ಏನು ಬರುತ್ತದೆ, ಅದು ಅಲ್ಲಿಯೇ ಥರ್ಮಲ್ ಪೇಪರ್‌ನಲ್ಲಿ ಪ್ರಿಂಟ್ ಆಗಿ ಹೊರಗೆ ಬರುವುದರಿಂದ ಯಾರಿಗೆ ಯಾರೂ ಮೋಸ ಮಾಡಲಿಕ್ಕೆ ಸಾಧ್ಯವಿಲ್ಲ. ಹಾಸನ ಜಿಲ್ಲೆಗೆ ಮಾನ್ಯ ರೇವಣ್ಣರವರು ಕೇಳಿದ್ದಾರೆ, machine manufacturers ಬೇಕಾದಷ್ಟು ಮೆಷಿನ್‌ಗಳನ್ನು ಕೊಡುವುದಕ್ಕೆ ಆಗಲಿಲ್ಲ ಎನ್ನುವ ಕಾರಣಕ್ಕಾಗಿ ಲೇಟಾಗುತ್ತಿರುವುದು ಬಿಟ್ಟರೆ, ಇಡೀ ರಾಜ್ಯದ 30 ಜಿಲ್ಲೆಗಳಲ್ಲಿ ಇದನ್ನು ಹಾಕುತ್ತೇವೆ. ಮತ್ತು ವ್ಯವಸ್ಥಿತವಾಗಿ ಅದನ್ನು ಜಾರಿ ಮಾಡಿದ್ದೇವೆ. ಕಾರ್ಡುಗಳನ್ನೂ ಅಷ್ಟೆ, ತಮ್ಮ ಜಿಲ್ಲೆಯಲ್ಲಿಯೂ ಎಲ್ಲಾ ವ್ಯಸ್ಥಿತವಾಗಿ ಕೊಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಯಾವ ವಿಷಯದ ಮೇಲೆ ಚರ್ಚೆಯಾಗುತ್ತಿದೆಯೆಂಬುದು ನನಗೆ ಅರ್ಥವಾಗಲಿಲ್ಲ. ಪೂರಕ ಅಂದಾಜುಗಳ ಮೇಲೆ ಚರ್ಚೆಯಾಗುತ್ತಿದೆಯೋ ಅಥವಾ ಏನು ನಡೆಯುತ್ತಿದೆ?

ಶ್ರೀ ಡಿ.ಎನ್. ಜೀವರಾಜ್ : ಅವರು ರೇಷನ್ ಕಾರ್ಡ್‌ಗಳ ಬಗ್ಗೆ ಕೇಳಿದರು.

ಶ್ರೀ ಟಿ.ಬಿ. ಜಯಚಂದ್ರ : ನಾನು ಒಪ್ಪಿಕೊಂಡೆ. ಅವರು ಆಕ್ಷೇಪಣೆ ಎತ್ತಿರುವುದು ನಿಜ. ಬಹುಶಃ ಅದೆಲ್ಲದಕ್ಕೂ ಉತ್ತರ ಕೊಡುವ ಅವಶ್ಯಕತೆ ಇದೆ. ಈಗ ಪೂರಕ ಅಂದಾಜುಗಳಿಗಷ್ಟೆ ಸೀಮಿತವಾಗಿ ಚರ್ಚೆ ಮಾಡೋಣ.

ಶ್ರೀ ಡಿ.ಎನ್. ಜೀವರಾಜ್ : ಅವರು ಹೇಳಿದ್ದರಿಂದ ನಾನು ಹೇಳಿದೆ ಅಷ್ಟೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ರೇವಣ್ಣನವರು ಹಣವನ್ನು ಬಿಡುಗಡೆ ಮಾಡಲಿ ಮತ್ತೆ ಬಿಲ್, ಅನ್ನು ಕೊಡಲಿ, ಅದಕ್ಕೆ ಸರ್ಕಾರ ಹೆಚ್ಚು ಹೆಚ್ಚು ಹಣವನ್ನು ಬಿಡುಗಡೆ ಮಾಡಲಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವುದು ಪೂರಕ ಅಂದಾಜಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ನೀವು ಹಸಿರು ಕಾರ್ಡ್‌ಗೆ ಕೊಡುತ್ತೀರಿ, ಇದು ಕೊಟ್ಟಾಗ ಉಪಯೋಗವಾಗಬೇಕು. ಇದಕ್ಕೆ ಬಿಲ್ ಕೊಡದೆ ಮಧ್ಯವರ್ತಿಗಳು ತಿನ್ನುತ್ತಿದ್ದಾರೆಂದು ಹೇಳುತ್ತಿದ್ದೇನೆ. ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಜಯಚಂದ್ರರವರು ಸರ್ಕಾರದ ಗಮನಕ್ಕೆ ತರುವುದು ಬೇಡ ಬೇಕಾದರೆ ಮಧ್ಯವರ್ತಿಗಳು ತಿಂದರೆ ತಿಂದು ಕೊಳ್ಳಲಿ ಎಂದರೆ ನಮ್ಮ ಅಭ್ಯಂತರವೇನೂ ಇಲ್ಲ. ನ್ಯಾಯ ಬೆಲೆ ಅಂಗಡಿಗಳ ಮಾಲೀಕರ ಪರವಾಗಿ ಮಾನ್ಯ ಜಯಚಂದ್ರರವರು ಇರುವುದಾದರೆ ನಾವೇನೂ ಬೇಡವೆಂದು ಹೇಳುವುದಿಲ್ಲ. ನಾನು ಹೇಳುವುದು, ನ್ಯಾಯ ಬೆಲೆ ಅಂಗಡಿಗಳಲ್ಲಿ ಹೀಗೆ ನಡೆಯುತ್ತಿದೆ, ಪೂರಕ ಬಜೆಟ್‌ನಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಬಗ್ಗೆ ಇರುವುದರಿಂದ ನಾನು ಹೇಳುತ್ತಿದ್ದೇನೆ. ಬೇಡ, ಅವರು ಮೇಯಿಕೊಳ್ಳಲಿ ಬಿಡಿ ಎಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಸುಮ್ಮನಿರುತ್ತೇವೆ. ಇಲ್ಲಿ ಚರ್ಚೆ ಮಾಡುವುದು ಬೇಡ, ಸುಮ್ಮನೆ ಪಾಸ್ ಮಾಡಿ ಎಂದರೆ ಹಾಗೆ ಮಾಡಿ. ನಾನು ಹೇಳುವುದು, ಸರ್ಕಾರ ಇಷ್ಟೆಲ್ಲಾ ಹಣ ಕೊಡುತ್ತದೆ, ಕೇಂದ್ರ ಸರ್ಕಾರ ಕೊಡುತ್ತದೆ, ರಾಜ್ಯ ಸರ್ಕಾರ ಹಣ ಕೊಡುತ್ತದೆ, ಕೊನೇ ಪಕ್ಷದ ಅದಕ್ಕೆ ಒಂದು ಬಿಲ್ ಆದರೂ ಕೊಡಬಾರದಾ? ಮಂತ್ರಿಗಳೇ ಹೇಳುತ್ತಿದ್ದಾರೆ, ಬಿಲ್ ಕೊಡುತ್ತಿಲ್ಲ ಮಾನ್ಯ ರೇವಣ್ಣರವರು ಹೇಳುತ್ತಿರುವುದು ನಿಜ ಎಂದು ಹೇಳಿದರು. ಇದರಲ್ಲಿ ನನ್ನ ಪರ್ಸನಲ್ ಏನೂ ಇಲ್ಲ. ಇನ್ನು ನೆಮ್ಮದಿ ಕೇಂದ್ರ ಎಂದು ಮಾಡಿ ರೈತರ ನೆಮ್ಮದಿ ಎಲ್ಲಾ ಹಾಳಾಗಿದೆ. ಹೋಬಳಿ ಹೆಡ್ ಕ್ವಾರ್ಟರ್‌ಗಳಲ್ಲಿ ನೆಮ್ಮದಿ ಕೇಂದ್ರ ಎಂದು ಮಾಡಿ ಒಂದನೇ ತಾರೀಕಿನಿಂದ ಜಾರಿಗೆ ತಂದಿದ್ದೀರಿ. ಇದಕ್ಕೂ ಕಂದಾಯ ಇಲಾಖೆಯಿಂದ ಪೂರಕ ಬಜೆಟ್ ಇಟ್ಟಿದ್ದೀರೋ ಇಲ್ಲವೋ ಗೊತ್ತಿಲ್ಲ. ನೆಮ್ಮದಿ ಕೇಂದ್ರದಲ್ಲಿ ಪಹಣೆ ತೆಗೆದುಕೊಳ್ಳಬೇಕಾದರೆ, ಒಂದು ಪಕ್ಕಾ ಪೋಡ್ ಮಾಡಿಸುವುದಕ್ಕೆ ಅರ್ಜಿ ಕೊಟ್ಟರೆ ಮೂರರಿಂದ ನಾಲ್ಕು ವರ್ಷಗಳು ಕಳೆದರೂ ಆಗುತ್ತಿಲ್ಲ. ಹಿಂದೆ ಹಳ್ಳಿಗಳಲ್ಲಿ ಶಾನುಭೋಗರಿಗೆ ಎರಡು ಸೇರು ಬೆಣ್ಣೆ ಕೊಟ್ಟರೆ ಅವರು ನಮ್ಮ ಪಹಣಿ ಮಾಡಿಕೊಡುತ್ತಾರೆಂದು

ಹೇಳುತ್ತಿದ್ದರು. ಇವತ್ತು ಒಂದು ಪಹಣಿ ತೆಗೆದುಕೊಳ್ಳಬೇಕಾದರೆ, computerize ಮಾಡಿದ್ದೀರಿ. ಆ ಖಾತೆಯನ್ನು ಪಕ್ಕಾ ಪೋಡ್ ಮಾಡಬೇಕಾದರೆ ಅರ್ಧ ಗುಂಟೆ ಜಮೀನು, ಎರಡು ಗುಂಟೆ, ಐದು ಗುಂಟೆ ಜಮೀನು ಮಾರಬೇಕಾದರೆ ತೊಂದರೆಯಾಗುತ್ತದೆ. ಈ ನೆಮ್ಮದಿ ಕೇಂದ್ರಗಳನ್ನು ಸರಿಪಡಿಸುವುದಕ್ಕೆ ಪೂರಕ ಬಜೆಟ್‌ನಲ್ಲಿ ಹಣ ಕೊಡುವು ದಾದರೆ ಕೊಡಿ ನಾವೇನೂ ಬೇಡವೆಂದು ಹೇಳುವುದಿಲ್ಲ. ಆದರೆ ನೆಮ್ಮದಿ ಕೇಂದ್ರಗಳನ್ನು ಮಾಡುವುದಾದರೆ ರೈತರಿಗೆ ಅನುಕೂಲವಾಗುವ ಹಾಗೆ ಸರಿಯಾದ ರೀತಿಯಲ್ಲಿ ಮಾಡಿ ಕೊಡಿ, ಇಲ್ಲವೆಂದರೆ ನೆಮ್ಮದಿ ಕೇಂದ್ರಗಳನ್ನು ಮುಚ್ಚಿ ಹಾಕಿ. ಹಳೆಯ ಪದ್ಧತಿಯಂತೆ ವಿಲೇಜ್ ಅಕೌಂಟೆಂಟ್ ಹಾಗೂ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ಅಧಿಕಾರ ಕೊಡಿ. ಇದರ ಜೊತೆಗೆ ಮೆಡಿಕಲ್ ಕಾಲೇಜುಗಳನ್ನು ಮಾಡಿದ್ದೀರಿ. ಅದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡದೇ ಹೋದರೆ ಹೇಗೆ? ಮೆಡಿಕಲ್ ಕಾಲೇಜುಗಳನ್ನು ಏತಕ್ಕಾಗಿ ಮಾಡಿದ್ದೀರಿ?

ಅಧ್ಯಕ್ಷರು : ಇದು ಪೂರಕ ಬಜೆಟ್. ಇದಕ್ಕೆ ಪೂರಕವಾಗಿ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಇವತ್ತು ಮೆಡಿಕಲ್ ಕಾಲೇಜುಗಳೆಲ್ಲ ಬಾಗಿಲು ಮುಚ್ಚುತ್ತಿವೆ. ಪೂರಕ ಬಜೆಟ್‌ನಲ್ಲಿ ದಯಮಾಡಿ ಇವುಗಳಿಗೆಲ್ಲ ಹಣ ಕೊಡಬೇಕು. ಬೇಕಾದ ಕಡೆಗೆ ಕೊಡುತ್ತಾರೆ.

ಅಧ್ಯಕ್ಷರು : ಅವರು ನಿಮ್ಮ ಮುಂದೆ ಏನು ಇಟ್ಟಿದ್ದಾರೆ ಅದರ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮೆಡಿಕಲ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಿಗೆ ಅವಕಾಶ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಮೆಡಿಕಲ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಗೆ, 3–4 ವರ್ಷಗಳಾದರೂ ಲೋಕೋಪಯೋಗಿ ಇಲಾಖೆಯ ಬಿಲ್ಲುಗಳನ್ನು ಕೊಟ್ಟಿಲ್ಲ. ಆಗಲೇ ಸಿದ್ದರಾಮಯ್ಯನವರು ಹೇಳಿದ ಹಾಗೆ ಈ ಬಿಲ್ಲುಗಳನ್ನು ಸೀನಿಯಾರಿಟಿ

ಮೇಲೆ ಕೊಡಬೇಕು. ನಾನು ಮತ್ತು ಸಿದ್ದರಾಮಯ್ಯನವರು ಸಚಿವರಾಗಿದ್ದಾಗ ಒಂದು ರೂಪಾಯಿಯೂ ಬಾಕಿ ಇಲ್ಲದ ಹಾಗೆ ಕೊಟ್ಟಿದ್ದೆವು. ಇವತ್ತು 3–4 ವರ್ಷಗಳಾದರೂ ಬಿಲ್ಲುಗಳನ್ನು ಕೊಟ್ಟಿಲ್ಲ. ಕೆಲವು ಕಡೆ ಇವತ್ತು ಕೆಲಸ ಮಾಡಿ ನಾಳೆ ಬೆಳಗ್ಗೆ ಬಿಲ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆ ಪರಿಸ್ಥಿತಿ ಆಗುವುದು ಬೇಡ. ಸೀನಿಯಾರಿಟಿ ಮೇಲೆ ಕೊಡಿ ಎಂದು ಅವರಿಗೆ ಕಟ್ಟುನಿಟ್ಟಾಗಿ ಹೇಳಬೇಕಾಗುತ್ತದೆ. ಸೀನಿಯಾರಿಟಿ ಬಿಟ್ಟು ಮಾಡಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಇದು ಪೂರಕ ಬಜೆಟ್. ಸದಸ್ಯರ ಅನಿಸಿಕೆಗಳನ್ನು ಕೇಳುವುದು ಬಹಳ ಸೂಕ್ತ. ಏಕೆಂದರೆ, ನಮ್ಮ ಅನಿಸಿಕೆಗಳನ್ನು ಕೇಳದೇ ಸುಮ್ಮನೆ ಆತುರಾತುರವಾಗಿ ಮಾಡಿಕೊಂಡು ಹೋದರೆ ಪ್ರಜಾಪ್ರಭುತ್ವಕ್ಕೆ ಶೋಭೆ ತರುವುದಿಲ್ಲ ಎನ್ನುವುದು ನನ್ನ ಭಾವನೆ. ನೀವು ಅವಕಾಶ ಕೊಡುವುದಿಲ್ಲವೆಂದರೆ ನಾನೇನು ಒತ್ತಾಯ ಮಾಡುವುದಿಲ್ಲ. ಕೊಟ್ಟರೆ ಒಂದೆರಡು ಸಲಹೆ ಕೊಡುತ್ತೇವೆ, ಕೊಡದಿದ್ದರೆ ಸುಮ್ಮನಿರುತ್ತೇವೆ.

ಅಧ್ಯಕ್ಷರು : ಆಯಿತು, ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಪೂರಕ ಬಜೆಟ್ ಅನ್ನು ಮಾಡಿದ್ದಾರೆ. ಇದಕ್ಕೆ ಸಂವಿಧಾನದ 205ನೇ ಆರ್ಟಿಕಲ್‌ನ 1(ಎ)ನಲ್ಲಿ ಅವಕಾಶ ಮಾಡಿದ್ದಾರೆ. ಅವಕಾಶ ಮಾಡಿದ್ದಾರೆಂದು ಹೇಳಿ, ಬಹಳ ದೊಡ್ಡ ಪ್ರಮಾಣದಲ್ಲಿ ಇದನ್ನು ತರುವುದು ಸೂಕ್ತ ಎಂದು ನನಗನ್ನಿಸುವುದಿಲ್ಲ. ಯಾವ ಕಾರಣಕ್ಕೋಸ್ಕರ ನಾವು constitution ನಲ್ಲಿ ಅವಕಾಶ ಮಾಡಿಕೊಂಡಿದ್ದೇವೋ, ಅದು ಸದುಪಯೋಗವಾಗಬೇಕು ಮತ್ತು ಅದರ ಜಬಾವ್ದಾರಿಕೆ ಹೆಚ್ಚಾಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಜವಾಬ್ದಾರಿಕೆ ಹೆಚ್ಚಾಗುತ್ತಿಲ್ಲ. ಮೂಲ ಬಜೆಟ್ ಅನ್ನು ಮಾಡುವಂಥ ಸಂದರ್ಭದಲ್ಲಿ ಅದರ ಘನತೆ ಗೌರವವನ್ನು ಹಾಳು ಮಾಡುತ್ತಿದ್ದಾರೆ. ಒಂಭತ್ತು ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕವಾಗಿರುವ ಒಂದು ಪೂರಕ ಬಜೆಟ್ ಅನ್ನು

ಎರಡನೇ ಕಂತಾಗಿ ತಂದಿದ್ದಾರೆ. ಮೊದಲನೇ ಕಂತು ಮುಗಿದು ಹೋಗಿದೆ. ಹೀಗೆ ಪೂರಕ ಬಜೆಟ್ ಅನ್ನು ತರಬೇಕಾದಂಥ ಸಂದರ್ಭ ಯಾವುದಿರುತ್ತದೆ ಎಂದರೆ ಸರ್ಕಾರದಲ್ಲಿ ಯಾವುದಾದರೂ ಹೊಸ ಯೋಜನೆಗಳನ್ನು introduce ಮಾಡಿದಾಗ, ಆಕಸ್ಮಿಕವಾಗಿ ಸರ್ಕಾರದಲ್ಲಿ ಒಂದು ಯೋಜನೆಗೆ ಬಹಳ priority ಯನ್ನು ಕೊಟ್ಟು, ಅದರಿಂದ ಆಗುವಂತ ವ್ಯತ್ಯಾಸಗಳು, ಸಾರ್ವಜನಿಕವಾಗಿ ಘನತೆ ಇರುವಂಥ ಕೆಲವೊಂದು ಕಾರ್ಯಗಳನ್ನು ಮಾಡುವಂಥ ಸಂದರ್ಭದಲ್ಲಿ ಹಣವನ್ನು ಹೆಚ್ಚು ಮಾಡುವಂಥಾದ್ದು ಸ್ವಾಭಾವಿಕವಾದಂಥ ವಿಚಾರ. ಆದರೆ ಇಲ್ಲಿ ಸರ್ಕಾರ ನಾವು ಯಾವ ರೀತಿ ಹಣವನ್ನು ಭರಿಸುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವತ್ತು, 9197 ಕೋಟಿ ರೂಪಾಯಿಗಳಷ್ಟು ಅಧಿಕವಾದಂಥ ಮೊತ್ತವನ್ನು ನಾವು ಖರ್ಚು ಮಾಡುತ್ತೇವೆ ಎಂದು ತಂದಿದ್ದಾರೆ. ಕೆಲವು ಇಲಾಖೆಗಳಿಗೆ consolidate ಮಾಡಿದ್ದಾರೆ. ಅದರಲ್ಲಿ ಬಹಳ ಮಹತ್ವಪೂರ್ಣವಾಗಿ ಇವರು ಯಾವುದೋ ರಾಜಕೀಯ ಪ್ರೇರಿತವಾಗಿ ತಂದಂಥ ಸಾಲ ಮನ್ನಾ ಯೋಜನೆಗೆ ಬೇರೊಂದು ಯೋಜನೆಯ ಸಾಮಾನ್ಯ ವೆಚ್ಚದಿಂದ ಭರಿಸುತ್ತೇವೆ, ಮತ್ತೊಂದು ಯೋಜನೆಗೆ ಇಟ್ಟಂಥ ಹಣವನ್ನು ಕಟ್ ಮಾಡುತ್ತೇವೆ ಎಂದರೆ, ಅದನ್ನು ಕಟ್ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ, ಇವರು ರಾಜಸ್ವ ನಿರೀಕ್ಷೆಯನ್ನು, ಸಾಮಾನ್ಯ ತೆರಿಗೆಯನ್ನು ಈ ಮೂಲದಿಂದ ಇಷ್ಟು ಸಾವಿರ ಕೋಟಿಯನ್ನು ತರುತ್ತೇವೆ ಎನ್ನುವ ಸ್ಪಷ್ಟವಾದಂಥ ನಿಲುವನ್ನು ಮಂಡನೆ ಮಾಡಬೇಕಾಗುತ್ತದೆ. ಆದರೆ ಅದ್ಯಾವುದನ್ನೂ ಮಂಡನೆ ಮಾಡಿಲ್ಲ. ಅದು ಬಿಟ್ಟು ಸುಮ್ಮನೆ ನಾವು ಭರಿಸುತ್ತೇವೆ ಎಂದರೆ, ನಾವು ಯಾವ ಯೋಜನೆಗಳನ್ನು ಮೂಲ ಬಜೆಟ್‌ನಲ್ಲಿ ಇಟ್ಟಿದ್ದೇವೆಯೋ, ಆ ಬಜೆಟ್‌ನಲ್ಲೇ ಕಡಿತ ಮಾಡಿ, ಇನ್ನೊಂದು ಇಲಾಖೆಗೆ ಹೆಚ್ಚುವರಿ ಅಥವಾ ಕಡಿಮೆ ಮಾಡುವಂಥ ಭಾವನೆ ಏನಿದೆ, ಇದು ನಿಜವಾಗಿಯೂ ಹಣಕಾಸಿನ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿಯುವುದಿಲ್ಲ, ಇದು ಅಂಥ ಮಹತ್ವಪೂರ್ಣವೂ ಆಗುವುದಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಕೆಲವೊಂದು ಇಲಾಖೆಗಳಿಗೆ ಕೊಟ್ಟುಕೊಂಡು

ಬಂದಿದ್ದಾರೆ. ಬಹಳ ಸಂತೋಷ. ವಸತಿ ಇಲಾಖೆಯ ಯೋಜನೆಯು ಬಹಳ ಮಹತ್ವ ಪೂರ್ಣವಾದಂಥ ಯೋಜನೆ. ಆ ಯೋಜನೆಗೆ ಈಗ ನೀವು 400 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಾಲುವುದಿಲ್ಲ. ಅದಕ್ಕೆ ಸುಮಾರು 2,500 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. 2,500 ಕೋಟಿ ಕೊಡುವುದಕ್ಕೆ ನೀವು ಇವತ್ತು 400 ಕೋಟಿ ಕೊಟ್ಟದ್ದೀರಿ. ಅಷ್ಟು ಕೊಟ್ಟರೆ ಆ ಯೋಜನೆಯೂ ಫಲಪ್ರದವಾಗುವುದಿಲ್ಲ. 9th phaseನಲ್ಲಿ ಕೇಂದ್ರ ಸರ್ಕಾರದಿಂದ P.M.G.S.Y. ಗೆ ನೀವು 50:50ರ ಅನುಪಾತದಲ್ಲಿ ಹಣವನ್ನು ಒದಗಿಸುವುದಾದರೆ ನಾವು ಇಷ್ಟು ಯೋಜನೆಗಳನ್ನು 9th phase ಗೆ ಕೊಡುತ್ತೇವೆ ಎನ್ನುವ ಒಂದು ಷರತ್ತನ್ನು ಹಾಕಿದರು. ಇದಕ್ಕೆ ನೀವು ಹಣವನ್ನು ತೊಡಗಿಸಿದರೆ ಇನ್ನೂ ಬೇಕಾದಷ್ಟು ಗ್ರಾಮೀಣ ಪ್ರದೇಶದ ರಸ್ತೆಗಳಿಗೆ ಅನುಕೂಲವಾಗುತ್ತಿತ್ತು. ಕೇಂದ್ರ ಸರ್ಕಾರದಿಂದ ಹಣ ಬರುತ್ತಿತ್ತು. ಆದರೆ ನೀವು ಹಣವನ್ನು ತೊಡಗಿಸದೇ ಇರುವುದರಿಂದ ಇವತ್ತು ಅದು ಬರುತ್ತಿಲ್ಲ. ಮುಖ್ಯಮಂತ್ರಿಗಳು ಆ ಒಂದು ಯೋಜನೆಗೆ ಇದರಲ್ಲಿ ಸ್ವಲ್ಪ ಹಣವನ್ನು ತೊಡಗಿಸಿದರೆ ಒಳ್ಳೆಯದಾಗುತ್ತಿತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ, ಕೇಂದ್ರ ಸರ್ಕಾರದ ಧನ ಸಹಾಯಕ್ಕೆ book adjustment ಮಾಡುತ್ತೇವೆ ಎನ್ನುವ ರೀತಿಯಲ್ಲಿ ಹೇಳಿದ್ದೀರಿ. ಮೊದಲೇ ನಿಮಗೆ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ರಾಜ್ಯ ಸರ್ಕಾರಕ್ಕೆ ಬರುತ್ತದೆ, ಕೇಂದ್ರ ಸರ್ಕಾರದ ಸಹಾಯ ನಿಧಿ ಹಣ ಎಷ್ಟು ಬರುತ್ತದೆ, ಎಷ್ಟು ಯೋಜನೆಗಳಿಗೆ ನೀವು ಯಾವ ಅನುಪಾತದಲ್ಲಿ ಹಣವನ್ನು ಒದಗಿಸಬೇಕು ಎನ್ನುವುದು ಸ್ಪಷ್ಟವಾಗಿ ನಿಮಗೆ ತಿಳಿದಿತ್ತು. ಆದರೆ ಇವತ್ತು ನೀವು book adjustment ಮಾಡಿ 2,000 ಕೋಟಿಗೂ ಅಧಿಕವಾಗಿರುವ ಹಣವನ್ನು ನಾವು ಕೇಂದ್ರ ಸರ್ಕಾರದ ಸಹಾಯ ನಿಧಿಗೆ ಕೊಡುತ್ತೇವೆ, ಅದಕ್ಕೆ ಹೊಂದಿಕೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಈಗ ನೀವು ಅನುಪಾತದಂತೆ ಹಣವನ್ನು ಕೊಡಲಿಕ್ಕೆ ಹೊರಟರೆ ಕೇಂದ್ರ ಸರ್ಕಾರದಿಂದ

ಬರುವಂಥ ಸಹಾಯದ ಹಣವನ್ನು ಉಪಯೋಗಿಸಿ ಕೊಳ್ಳಲು ಸಾಧ್ಯತೆ ಇದೆಯೇ? ನಿಮ್ಮ ಮೂಲ ಬಜೆಟ್‌ನಲ್ಲಿ ನೀವು ಏನು ಮಾಡುತ್ತೀದ್ದೀರಿ ಎನ್ನುವ ಎಲ್ಲ ಸಮಸ್ಯೆಗಳು ಉದ್ಭವವಾಗುತ್ತದೆ. ಇವತ್ತು ಸಮಾಜ ಕಲ್ಯಾಣ ಇಲಾಖೆಯು ನಿಜವಾಗಲೂ ಶಾಸಕರಿಗೆ ಒಂದು ಉತ್ತಮವಾದಂಥ ಗೌರವವನ್ನು ತಂದುಕೊಡುತ್ತಿದೆ. ಕಳೆದ 65 ವರ್ಷಗಳಿಂದ ಎಸ್.ಸಿ./ಎಸ್.ಟಿ. ಕಾಲೋನಿಗಳು ಬಹಳ ದುಸ್ಥಿತಿಯಲ್ಲಿದ್ದವು, ಅವುಗಳನ್ನು ಸುಧಾರಣೆ ಮಾಡುವಂಥ ನಿಟ್ಟಿನಲ್ಲಿ ಒಂದು ಒಳ್ಳೆಯ ಯೋಜನೆ ಇವತ್ತು ಪ್ರಾರಂಭವಾಗಿದೆ. ಎಷ್ಟು pooled amountಅನ್ನು transfer ಮಾಡಿ ಸಮಾಜ ಕಲ್ಯಾಣ ಇಲಾಖೆಗೆ S.C.P./S.T.P. ಗೆ ಕೊಡುತ್ತೀರಿ ಎನ್ನುವುದನ್ನು ಈ ಬಜೆಟ್‌ನಲ್ಲಿ ಕಾಣಿಸುತ್ತೀರಿ ಎನ್ನುವ ನಿರೀಕ್ಷೆ ಮಾಡಿದ್ದೆ. ಬಹುಶಃ ಅದಕ್ಕೆ ಬಹಳ ಕಡಿಮೆ ಇಟ್ಟಿದ್ದೀರಿ. ಅದು ಸಾಕಾಗುವುದಿಲ್ಲ. ಇನ್ನೂ ಅನೇಕ ಇಲಾಖೆಗಳಿಗೆ ದೊರಕಬೇಕಾದ ಹಣವನ್ನು ಬಹಳ ಪ್ರಾಮಾಣಿಕವಾಗಿ ದೊರಕಿಸಿಕೊಡಬೇಕು. ನೀವು ಕೆಲವೊಂದು ಒಳ್ಳೆಯ ಯೋಜನೆಗಳನ್ನು ಮಾಡಿದ್ದೀರಿ. "ನಮ್ಮ ಮನೆ ನಮ್ಮ ರಸ್ತೆ" ಯೋಜನೆಯು ಶಾಸಕರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದೆ. ಮಾಡಿರುವುದನ್ನು ಮಾಡಿಲ್ಲ ಎಂದು ನಾವು ಹೇಳಿದರೆ ತಪ್ಪಾಗುತ್ತದೆ. ಅದೇ ರೀತಿ, ದಯವಿಟ್ಟು P.M.G.S.Y. ನಲ್ಲಿ 9ನೇ ಫೇಸ್‌ಗೆ ಕೇಂದ್ರ ಸರ್ಕಾರ ಯಾವ ಅನುಪಾತದಲ್ಲಿ ಹಣ ಕೇಳಿದೆ, ಆ ಹಣವನ್ನು ಈ ಪೂರಕ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡು ದಯವಿಟ್ಟು ಎಲ್ಲ ರಸ್ತೆಗಳು ಬರಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಆಗಬೇಕು ಎನ್ನುವುದು ನನ್ನ ಒಂದು ಆಸೆ ಎನ್ನುವುದನ್ನು ಹೇಳುತ್ತೇನೆ.

ಅಧ್ಯಕ್ಷರು : ದಯವಿಟ್ಟು ಬೇಗ ಮುಗಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕಾನೂನಿನ ಚೌಕಟ್ಟನ್ನು ಮೀರಿ ನೀವು ಸ್ಪಷ್ಟವಾದಂಥ ನಿಲುವನ್ನು ತೋರಿಸಬೇಕು. ಕಾನೂನಿನಲ್ಲಿ ಅವಕಾಶವಿದೆ. ಆದರೆ ಆ ಹಣವನ್ನು ಸಾಮಾನ್ಯ ತೆರಿಗೆಯಿಂದ ಎಲ್ಲಿಂದ ತರುತ್ತೀರಿ ಎನ್ನುವುದನ್ನು ಸ್ವಲ್ಪ ಸ್ಪಷ್ಟವಾಗಿ ಸದಸ್ಯರಿಗೆ, ಸದನಕ್ಕೆ ತಿಳಿಸಿದರೆ ಬಹಳ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಹೊಸದಾಗಿ

ಬಂದಿದ್ದೇವೆ, ನಮಗೆ ಇವುಗಳನ್ನೆಲ್ಲ ತಿಳಿದುಕೊಳ್ಳಬೇಕು ಎನ್ನುವ ಆಸೆ ಇರುತ್ತದೆ. ಅದಕ್ಕೋಸ್ಕರ ಎರಡು ಮಾತುಗಳನ್ನು ಆಡುತ್ತೇವೆ ಎಂದು ಕೇಳುತ್ತೇವೆ ಅಷ್ಟೇ. ಅದಕ್ಕೇ ನೀವು ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ? ಬೆಲ್ ಹೊಡೆದಿರಿ. ಐದು ನಿಮಿಷಗಳಲ್ಲಿ ನಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಆಗುತ್ತದೆಯೇ? ಪೂರಕ ಬಜೆಟ್ ಮೇಲೆ ಸಾಮಾನ್ಯವಾಗಿ ಒಂದು ದಿವಸ ಚರ್ಚೆಯಾಗಬೇಕು. 9,000 ಕೋಟಿ ರೂಪಾಯಿಗಳ ಬಜೆಟ್ ಅನ್ನು ನಾವು ಪಾಸ್ ಮಾಡಿ ಕೊಡಬೇಕಾದರೆ ಚರ್ಚೆಯಿಲ್ಲದೇ ಹೇಗೆ ಮಾಡಿ ಕೊಡುವುದಕ್ಕಾಗುತ್ತದೆ? ಎಲ್ಲ ಅಂಕಿಸಂಖ್ಯೆಗಳನ್ನು ಹೇಳಬೇಕಾಗುತ್ತದೆ. ನಾವು ಎಲ್ಲವನ್ನು ಗುರುತು ಹಾಕಿಕೊಂಡು ಬಂದಿದ್ದೇವೆ. ಆದರೆ ಇಲ್ಲಿ ನಮಗೆ ಎಲ್ಲವನ್ನೂ ಹೇಳಲು ಆಗುತ್ತಿಲ್ಲ. ಆಯಿತು, ನನಗೆ ಮಾತನಾಡಲು ಇಷ್ಟು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಸಾರ್ವಭೌಮ ಸಾತಗೌಡ ಬಗಲಿ (ಇಂಡಿ) : ಮಾನ್ಯ ಅಧ್ಯಕ್ಷರೆ, 2006–07ರಲ್ಲಿ ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ರೈತರಿಗೆ ಸರ್ಕಾರ 30 ಕೋ.ರೂ.ಗಳ ಪರಿಹಾರಧನ ಘೋಷಣೆ ಮಾಡಿತ್ತು. 2010ರಲ್ಲಿ ಕಬ್ಬ ಬೆಳೆಗಾರರಿಗೆ ಕೇವಲ 15 ಸಾವಿರ ಕೋ.ರೂ.ಗಳ ಪರಿಹಾರ ಧನವನ್ನು ನೀಡಿ ಇನ್ನೊಂದು ತಿಂಗಳಲ್ಲಿ ಬಾಕಿ ಹಣವನ್ನು ನೀಡುತ್ತೇವೆನ್ನುವ ಆಶ್ವಾಸನೆಯನ್ನು ಸರ್ಕಾರ ನೀಡಿತ್ತು. ಆದರೆ, 2 ವರ್ಷಗಳು ಕಳೆದರೂ ಇನ್ನೂ ನನ್ನ ಕ್ಷೇತ್ರದ ಕಬ್ಬು ಬೆಳೆಗಾರರಿಗೆ 15 ಕೋ.ರೂ. ಬಾಕಿ ನೀಡಬೇಕಾಗಿದೆ. ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುವುದೇನೆಂದರೆ, ದಯವಿಟ್ಟು ಕಬ್ಬು ಬೆಳೆಗಾರರಿಗೆ ನೀಡಬೇಕಾದಂಥ ಬಾಕಿ ಪರಿಹಾರ ಹಣವನ್ನು ಪೂರಕ ಬಜೆಟ್‌ನಲ್ಲಿ ತೆಗೆದುಕೊಂಡು ತಮ್ಮ ಉತ್ತರದಲ್ಲಿ 15 ಕೋಟಿ ರೂ. ಬಾಕಿ ಪರಿಹಾರವನ್ನು ರೈತರಿಗೆ ನೀಡುತ್ತೇನೆ. ಎನ್ನುವ ಆಶ್ವಾಸನೆಯನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ) : ಇವತ್ತು ಪೂರಕ ಅಂದಾಜುಗಳಿಗೆ ಒಪ್ಪಿಗೆ ಕೇಳಿ ಮಂಡನೆ ಮಾಡಿದ್ದೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಉಳಿದ ಎಲ್ಲಾ ಶಾಸಕರು ರೇವಣ್ಣರವರಾಗಲಿ,

ಶಿವಲಿಂಗೇಗೌಡರಾಗಲಿ ಇದರ ಬಗ್ಗೆ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಬೇರೆ ಬೇರೆ ವಿಚಾರಗಳಿಗೆ ಸಂಬಂಧಪಟ್ಟಂತೆ RDPR Department, ವಸತಿ, ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇವತ್ತು ಪೂರಕ ಬಜೆಟ್‌ನಲ್ಲಿ 9000 ಕೋ. ರೂ.ಗಳಷ್ಟು ಅಂದಾಜು ಏನು ಮಾಡಿದ್ದೇವೆ, ಯಾವ ಸೋರ್ಸ್ ಮೂಲಕ ಮಾಡುತ್ತೀರಿ ಎಂದು ಹೇಳಿದ್ದಾರೆ. First instalment 3670 ಕೋ.ರೂ. ಮತ್ತು ಕಳೆದ 5–6 ವರ್ಷಗಳದ್ದು ನೋಡಿದರೆ ಆ ಸಂದರ್ಭದಲ್ಲಿ ಸಹ 2007–08ರಲ್ಲಿ 2ನೇ ಕಂತಿನಲ್ಲಿ 3311 ಕೋ.ರೂ., 2008–09ರಲ್ಲಿ 6207 ಕೋ.ರೂ., 2009–10ರಲ್ಲಿ 10,009 ಕೋ.ರೂ., 2010–11ರಲ್ಲಿ 5060 ಕೋ.ರೂ., 2011–12ರಲ್ಲಿ 3864 ಕೋ.ರೂ. ಇದೆ. ಈಗ ನಾನು 9197 ಕೋ.ರೂ. ಪೂರಕ ಅಂದಾಜನ್ನು ಕೇಳುತ್ತಿದ್ದೇನೆ. ಇದರಲ್ಲಿ ಪ್ರಮುಖವಾದ ವಿಚಾರಗಳಿವೆ, ಈಗಾಗಲೇ ನಾನು ಹೇಳಿದಹಾಗೆ, ಅದರಲ್ಲಿ ವಸತಿ ಬಗ್ಗೆ ನಮ್ಮ ಪ್ರಕಾಶ್ ಹುಕ್ಕೇರಿಯವರು, ವಿರೋಧ ಪಕ್ಷದ ನಾಯಕರು raise ಮಾಡಿದರು. ಈಗ ನಾನು 400 ಕೋ.ರೂ. ಕೇಳುತ್ತಿದ್ದೇನೆ. ಈಗ ವಸತಿ ಇಲಾಖೆ ಬಹಳಷ್ಟು ಕಾರ್ಯ ಚಟುವಟಿಕೆ ಮಾಡುತ್ತಿದೆ, ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ, ಬಹಳಷ್ಟು ಮನೆಗಳನ್ನು ಹಂಚಿದಾರೆ. ಹೀಗಾಗಿ ಹೆಚ್ಚಿನ ಹಣಕಾಸಿನ ಅವಶ್ಯಕತೆ ಇದೆ. ಗುಲಬರ್ಗಾ ಕ್ಯಾಬಿನೆಟ್‌ನಲ್ಲಿ ಸಹ ಹೆಚ್ಚು ಹಣ ಬೇಕೆನ್ನುವ ಪ್ರಸ್ತಾವನೆ ಬಂತು. ನಾವು ಅಲ್ಲಿ ಒಟ್ಟು 1 ಸಾವಿರ ಕೋ.ರೂ.ಗಳನ್ನು ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿದ್ದೇವೆ. ಅದಕ್ಕಾಗಿ immediately ಏನು need ಇದೆ, ಅದರ ಸಲುವಾಗಿ 400 ಕೋ.ರೂ. ಗಳನ್ನು ನಾವು ಇವತ್ತು ಪೂರಕ ಅಂದಾಜಿನಲ್ಲಿ ಸೇರಿಸಿದ್ದೇವೆ. Additionally ಆಗಿ ಒಟ್ಟು 1 ಸಾವಿರ ಕೋ.ರೂ.ಗಳನ್ನು ಕೊಡಬೇಕೆಂದು ನಾವು ಗುಲಬರ್ಗಾ ಕ್ಯಾಬಿನೆಟ್‌ನಲ್ಲಿ ಡಿಸೈಡ್ ಮಾಡಿದ್ದೇವೆ. ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಈಗಾಗಲೇ ನಮ್ಮ ಕೆಲವು ಶಾಸಕರು ಹೇಳಿದ ಹಾಗೆ, ಬಹಳಷ್ಟು ಕಡೆ ಕೆಲಸ ಪ್ರಾರಂಭವಾಗಿವೆ, requirement ಬಹಳ ಇದೆ, ಹಣಕಾಸಿನ ಅವಶ್ಯಕತೆ ಇದೆ ಎಂದು

ಹೇಳಿದರು. ಎಲ್ಲಾ ಸೇರಿ ಇನ್ನೂ 1 ಸಾವಿರ ಕೋ.ರೂ. ಬೇಕಾಗುತ್ತದೆ. ನಾನು ಈಗಾಗಲೇ 400 ಕೋ.ರೂ. ಗಳನ್ನು ಕೊಟ್ಟಿದ್ದೇನೆ. ಈಗ regular budget ನಲ್ಲಿ ಏನು budget allocation ಮಾಡಿದ್ದೇವೆ, ಅದನ್ನು ಹೊರತುಪಡಿಸಿ 1 ಸಾವಿರ ಕೋಟಿ ರೂ. ಬೇಕಾಗುತ್ತದೆ. ಆ ದೃಷ್ಟಿಯಿಂದ ಅದನ್ನು ನಾವು ಪ್ರಾಮಿಸ್ ಮಾಡಿದ್ದೇವೆ. ಗುಲಬರ್ಗಾ ಕ್ಯಾಬಿನೆಟ್‌ನಲ್ಲಿ ಆ ವಿಷಯವನ್ನೂ ಪಾಸ್ ಮಾಡಿದ್ದೇವೆ. ಹೀಗಾಗಿ, ಅವತ್ತು ನಾನು ಸಾಲ ಮನ್ನಾ ಘೋಷಣೆ ಮಾಡಿದ ಸಂದರ್ಭದಲ್ಲಿ ಮುಂದೆ VAT ನಲ್ಲಿ 0.5 ನಷ್ಟು ಅದರಲ್ಲಿ ನಾವು enhance ಮಾಡಿ ಅದರಿಂದ ನಮಗೆ ಆ tax collection ನಿಂದ 1400 ಕೋ.ರೂ.ಗಳಷ್ಟು ಬರಬಹುದೆನ್ನುವ ಲೆಕ್ಕಾಚಾರವಿದೆ. ಅದರಿಂದ ಬರುತ್ತಿದೆ. ಉಳಿದಂತೆ, Excise ನಿಂದ 450 ಕೋ. ರೂ. ಹೆಚ್ಚುವರಿ ಬರುವುದನ್ನು ನಾವು ನಿರೀಕ್ಷೆ ಮಾಡಿದ್ದೇವೆ. Non tax revenue ನಿಂದ 200 ಕೋ. ರೂ. ಬರುತ್ತದೆ. Vehicle tax ನಿಂದ 150 ಕೋ. ರೂ. ಬರುತ್ತದೆ. ಒಟ್ಟು 2200 ಕೋ. ರೂ. ಇಲ್ಲಿ ಬಂದರೆ ಮತ್ತು ಕೇಂದ್ರ ಸರ್ಕಾರದಿಂದ ನಮಗೆ ಅನುದಾನ ಬರುತ್ತಿದೆ. ಅವೆಲ್ಲಾ ಸೇರಿ ನಾವು ಈ ರೀತಿಯ calculation ಮಾಡಿಕೊಂಡು ಇದನ್ನು ಮಾಡಿದ್ದೇವೆ. ಹೀಗಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು, ಇವತ್ತು expenditure ಮಾಡುವುದರಲ್ಲಿ ಕೆಲವು ಇಲಾಖೆಗಳಲ್ಲಿ ಖರ್ಚಾಗುವುದಿಲ್ಲವೆಂದು ಹೇಳಿದರು. ಅದನ್ನು ಸಹ ಇವತ್ತು ಮಾಡಿದಾಗ, ಪ್ರತಿವರ್ಷದ average ಅನ್ನು ನಾವು ತೆಗೆದುಕೊಂಡಾಗ, 9000 ಕೋ. ರೂ. ನಷ್ಟು calculation ಏನಿದೆ, ಅದನ್ನು ನಾವು fulfill ಮಾಡುವುದನ್ನು ಮಾಡುತ್ತೇವೆ ಎನ್ನುವ ಮಾತು ಹೇಳುತ್ತೇನೆ. ಬಹಳ ಮುಖ್ಯವಾಗಿ ಇನ್ನೊಂದು ವಿಚಾರವೆಂದರೆ, ಇವತ್ತಿನ ನಮ್ಮ tax collection ನೋಡಿದರೆ, ಈ ವರ್ಷ 50% ನಷ್ಟು ನಮ್ಮ performance ಇದೆ. ಇಲ್ಲಿಯವರೆಗೆ ನಮ್ಮ tax collection 25590 ಕೋ. ರೂ. This is 50% September end ಒಳಗೆ 50% tax collect ಆಗಿದೆ. ಏನು performance ಮಾಡಬೇಕಾಗಿದೆ

ಅದರಲ್ಲಿ ನಾವು ಈಗಾಗಲೇ 50% ಮಾಡಿದ್ದೇವೆ. ಇದೆಲ್ಲಾ ನಾವು ನಿರೀಕ್ಷೆ ಮಾಡಿದಾಗ 2500 ಕೋ. ರೂ. ಗಳಷ್ಟು ನಾವು ಹೆಚ್ಚುವರಿ tax collection ನಲ್ಲಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ. ಹೀಗಾಗಿ, ಇವನ್ನೆಲ್ಲ ನಾವು adjust ಮಾಡಿಕೊಂಡೇ 9000 ಕೋ. ರೂ. ಗಳಷ್ಟು ಅಂದಾಜನ್ನು ಮಾಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ನಾವು ರೈತರ ಸಾಲ ಮನ್ನಾಕ್ಕೆ ಉಪಯೋಗಿಸಿಕೊಳ್ಳುತ್ತೇವೆ ಎನ್ನುವ ಮಾತು ಹೇಳಿದಿರಿ. VAT ನಿಂದ ಸುಮಾರು 1600 ಕೋ.ರೂ. ಬರುತ್ತದೆಂದು ಹೇಳಿದಿರಿ. ಆದರೆ, ಸಾಲ ಮನ್ನಾದ due ಯಾವಾಗ ಆಗುತ್ತದೆಂದರೆ, ದಿ: 15-6-2013 ರ ನಂತರ. ಅಂದರೆ ಒಂದು ಕಡೆ ರೈತರ ಹೆಸರಿನಲ್ಲಿ ಹಣವನ್ನು ನೀವು tax ಮೂಲಕ collect ಮಾಡುತ್ತೀರಿ. VAT raise ಮಾಡಿದ್ದೇ ಅದಕ್ಕೋಸ್ಕರ. ಮತ್ತೆ ನೀವು ಕೊಡುವುದು ಯಾವಾಗ ಎಂದರೆ, ದಿ: 15-6-2013ರಿಂದ.

ಶ್ರೀ ಜಗದೀಶ್ ಶೆಟ್ಟರ್ : ಕಳೆದ ವರ್ಷ 350 ಕೋ.ರೂ.ಗಳನ್ನು release ಮಾಡಿದ್ದೇವೆ. Demand start ಆಗಿದೆ. ತಿಂಗಳು ತಿಂಗಳು ಎಷ್ಟು due ಆಗುತ್ತದೆ ಅದನ್ನು ನಾವು ಕೊಡಲೇಬೇಕಾಗುತ್ತದೆ. ಒಂದು ವರ್ಷದ ನಂತರ ಕೊಡುತ್ತೇವೆಂದಲ್ಲ. ಈಗ demand start ಆಗಿದೆ, 350 ಕೋ. ರೂ.ಗಳನ್ನು release ಮಾಡಿದ್ದೇವೆ. ಹೀಗಾಗಿ, ಅದರ ಅವಶ್ಯಕತೆ ಇದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ದಿ: 1.4.2012 ರಿಂದ ಆ ಸಾಲದ ಬಡ್ಡಿ ಮನ್ನಾ ಬಗ್ಗೆ last time ಹೇಳಿದಿರಿ. ಕಬ್ಬು ಬೆಳೆಗಾರರಿಗೆ ತೊಂದರೆಯಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಅದನ್ನು ಹೇಳಿದ್ದೀರಿ. ನಿಮ್ಮ ಗಮನಕ್ಕೆ ತರುವುದೇನೆಂದರೆ, ಇತ್ತೀಚಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಆ ದಿನಾಂಕಗಳನ್ನು ಸ್ವಲ್ಪ ಬದಲಾವಣೆ ಮಾಡಿ extend ಮಾಡಿದ್ದೇವೆ. ಅದನ್ನು ಸ್ವಲ್ಪ verify ಮಾಡೋಣವಂತೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ತೊಂದರೆ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಅದರ ಸಲುವಾಗಿಯೇ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದು ಪ್ರಸ್ತಾಪವಾಯಿತು.

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲಿ announce ಮಾಡಿ ಸಾರ್.

ಶ್ರೀ ಜಗದೀಶ್ ಶೆಟ್ಟರ್ : ಆ ದಿನಾಂಕವನ್ನೂ ಹೇಳುತ್ತೇನೆ. ಯಾವಾಗ extend ಮಾಡಿದ್ದೇವೆ ಎನ್ನುವ ಮಾಹಿತಿಯನ್ನೂ ನಿಮಗೆ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : 01–04–2012ರಿಂದ ಯಾರ‍್ಯಾರು ಬಡವರು ಸಾಲ ಮಾಡಿದ್ದಾರೆ ಅವರಿಗೆ one time 25 ಸಾವಿರ ರೂ. ಎಂದು ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : 15 ದಿವಸಗಳ ಹಿಂದೆ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಾವು date extension ತಿದ್ದುಪಡಿ ಮಾಡಿದ್ದೇವೆ. ನಾನು ದಿನಾಂಕ ತಿಳಿಸುತ್ತೇನೆ. 0% interest ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು. ಇದು ಪ್ರಾರಂಭವಾಗುವುದು ದಿ: 1.4.2013ರಿಂದ. ಆಗ ಇದನ್ನು calculation ಮಾಡಬೇಕಾಗುತ್ತದೆ. ತಾವೇನು 0% interest ಬಗ್ಗೆ ಸಲಹೆ ಕೊಟ್ಟಿದ್ದೀರಿ, ಅದನ್ನು ಆಗ consider ಮಾಡುವುದಾಗುತ್ತದೆ.

ಶ್ರೀ ಸಿದ್ದರಾಮಯ್ಯ : ನನ್ನ ಹತ್ತಿರ DCC Bank ಇಬ್ಬರು ಮೂವರು ಅಧ್ಯಕ್ಷರು ಬಂದಿದ್ದರು. ಅವರು ಹೇಳುವ ಪ್ರಕಾರ, ಸರ್ಕಾರ ಕೊಡದೇ ಹೋದರೆ, ನಾವು 12–13% ಬಡ್ಡಿ ವಸೂಲು ಮಾಡಬೇಕಾಗುತ್ತದೆ. ಅದನ್ನು ಕೊಟ್ಟರೆ ಅನುಕೂಲವಾಗುತ್ತದೆ ಇಲ್ಲದೇ ಹೋದರೆ ಜನರು deposit ಕೊಟ್ಟಿರುತ್ತಾರೆ, ಅವರಿಗೆಲ್ಲಾ ನಾವು ಬಡ್ಡಿ ಹಣ ವಾಪಸ್ ಕೊಡಬೇಕು. ಅದಕ್ಕೋಸ್ಕರ ಬಡ್ಡಿ ಹಣ ವಸೂಲು ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ದಿ: 1.4.2013ರಿಂದ due ಆಗುತ್ತದೆ. 0% interest calculation ಏನಿದೆ ಅದನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : District Cooperative Banks are in problems.

ಶ್ರೀ ಜಗದೀಶ್ ಶೆಟ್ಟರ್ : Definitely ಮಾಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : Otherwise ನೀವು ಕೊಡದೇ ಹೋದರೆ ಅವರೇನು ಮಾಡುತ್ತಾರೆಂದರೆ, 0% interest ನಲ್ಲಿ ನೀವು 1–1 ಲಕ್ಷ ರೂ. ಕೋಟಿದ್ದೀರಲ್ಲಾ, ಅವರು 12–13% ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ನೀವು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಆ financial institutions ಗೆ ತೊಂದರೆಯಾಗದ ರೀತಿಯಲ್ಲಿ, ನಮ್ಮ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ನಾವು ಮಾಡುತ್ತೇವೆ. ಅದರಲ್ಲೇನಾದರೂ ಹೆಚ್ಚುಕಡಿಮೆಯಾದ ಅದನ್ನು ಸರಿಪಡಿಸುವುದನ್ನು ನಾವು definite ಆಗಿ ಮಾಡುತ್ತೇ. Cooperative Institutions ಗೆ ನಾವು direction ಕೊಡುತ್ತೇವೆ. ಅವರ ಕಡೆಯಿಂದ ಮಾಹಿತಿ ತೆಗೆದುಕೊಂಡು ಅವರ ರಕ್ಷಣೆ ಮಾಡುವುದನ್ನು ನಾವು ಮಾಡುತ್ತೇವೆ. ರೇವಣ್ಣನವರು, 3 ಲಕ್ಷ ರೂ.ಗಳವರೆಗೆ ಇರುವಂಥದ್ದು, 0% interest 1 ಲಕ್ಷ ರೂ.ಗಳವರೆಗೆ ಇದೆ ಎಂದು ಹೇಳಿದರು. ಒಂದು ಲಕ್ಷ ರೂ. ಗಳವರೆಗೆ 0% interest ಇದೆ. ಮುಂದೆ 3 ಲಕ್ಷ ರೂ.ಗಳನ್ನು ಲೋನ್ ತೆಗೆದುಕೊಂಡವರಿಗೆ 6–5% interest ಆಗುತ್ತದೆ. ಒಂದು ಲಕ್ಷ ರೂ. ಗಳವರೆಗೆ extension ಕೊಡಿ ಎಂದು ರೇವಣ್ಣನವರೆ ನೀವು ಕೇಳುತ್ತಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹೇಳಿದ್ದೇನೆಂದರೆ, ಒಂದು ಲಕ್ಷ ರೂ.ಗಳವರೆಗೆ 0% interest ಇದೆ. ಅದನ್ನು 2 ಲಕ್ಷ ರೂ.ಗಳವರೆಗೆ ಮಾಡಿಸಿ ಸಾರ್.

ಶ್ರೀ ಸಿದ್ದರಾಮಯ್ಯ : 1 ಲಕ್ಷ ರೂ.ಗಳವರೆಗೆ 0% interest Next 3 ಲಕ್ಷ ರೂ.ಗಳವರೆಗೆ 0% interest ಇದೆ.

ಶ್ರೀ ಜಗದೀಶ್ ಶೆಟ್ಟರ್ : 3% ಆಗುತ್ತದೆ. ಅದರ ಬದಲು 1 ಲಕ್ಷ ರೂ.ಗಳವರೆಗೆ 0% interest ಹಾಕಿ. ಉಳಿದ 2 ಲಕ್ಷ ರೂ.ಗಳಿಗೆ 5–6% regular interest ಆಗುತ್ತದೆ ಅದನ್ನೂ ನಾನು consideration ಮಾಡುತ್ತೇನೆ.

ಮುಖ್ಯವಾಗಿ ಇಲ್ಲಿ ವಿರೋಧ ಪಕ್ಷದ ನಾಯಕರು, ರೇವಣ್ಣನವರು ಪ್ರಸ್ತಾಪ ಮಾಡಿದ್ದರು. Rural Developement ಬಗ್ಗೆ ಹೇಳುವುದಾದರೆ, 800–720 ಕೋ.ರೂ. ಕೇಂದ್ರ ಸರ್ಕಾರದಿಂದ ಬರುತ್ತದೆ. ಅದನ್ನು mention ಮಾಡುತ್ತಿದ್ದೇನೆ. ಅದರಲ್ಲಿ 80 ಕೋಟಿ ರೂ. ನಮ್ಮ ರಾಜ್ಯ ಸರ್ಕಾರದ್ದು. ಆದರೆ, 800 ಕೋಟಿ ರೂ.ಗಳನ್ನು ನಾನು ಈ ಪೂರಕ ಅಂದಾಜಿನಲ್ಲಿ ಇಟ್ಟಿದ್ದೇನೆ. ಇದರಲ್ಲಿ NREGS ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ. ಅವರು ಇನ್ನೊಂದು ವಿಚಾರವನ್ನು ಮುಖ್ಯವಾಗಿ raise ಮಾಡಿದ್ದೇನೆಂದರೆ, NREGS ದಲ್ಲಿ ಬಹಳ complaints ಇವೆ, enquiry ನಡೆಯುತ್ತಿವೆ ಎಂದು ಹೇಳಿದರು. ಅದು ನಿಜ. ನಾನು Rural Development Minister ಆಗಿದ್ದೆ. ಜಯಚಂದ್ರರವರು 2–3 ಸಲ delegation ತೆಗೆದುಕೊಂಡು ಬಂದಿದ್ದರು. ಕೂಲಿ ಕೊಟ್ಟಿಲ್ಲದಿರುವುದು ಯಾವಾಗಿನ ಸಮಸ್ಯೆ ಎಂದರೆ 2009–10ರದ್ದು. 2009–10ನೇ ಸಾಲಿನಲ್ಲಿ ಬಹಳಷ್ಟು enquiry and complaints ಆದಮೇಲೆ Central Team ಬಂದು ಹೋಯಿತು. ಗುಲ್ಬರ್ಗಾ, ತುಮಕೂರು ಜಿಲ್ಲೆಗಳಿಗೆ Central Team ನವರು ಬಂದು ಅದರ enquiry start ಮಾಡಿದರು. ಈ ರೀತಿಯ ಪರಿಸ್ಥಿತಿ ಇದ್ದಾಗ ಅವರು enquiry ಆಗಿವೆ. Enquiry ಮಾಡಿ ನಾವು ಕೇಂದ್ರ ಸರ್ಕಾರಕ್ಕೆ report ಕಳುಹಿಸಿದ್ದೆವು. ಅವರು ಇದರಲ್ಲಿ ಮತ್ತೂ ಸ್ಪಷ್ಟೀಕರಣ ಕೇಳಿ ಮತ್ತೊಂದು ಸಲ ವಾಪಸ್ಸು ಕಳುಹಿಸಿದರು. 2–3 ಸಲ ಇದು examination ಆಗಿದೆ. ಇದಾದ ಮೇಲೆ direction ಏನಿದೆ ಎಂದರೆ

ನಾವು ಇದನ್ನು ಪೂರ್ಣವಾಗಿ clearance ಮಾಡಲಾಗದೆ ನೀವು payment ಮಾಡಬಾರದು. ಇದು ಸಮಸ್ಯೆ ಇದೆ. ಆ ದೃಷ್ಟಿಯಿಂದ payment ಆಗುತ್ತಿಲ್ಲವೇ ಹೊರತು ಬೇರೆ ಏನೂ ಇಲ್ಲ. Third party inspection ಮಾಡಿಸಿ report ಕೊಟ್ಟಿದ್ದೇವೆ. Clearance ಇಲ್ಲದೆ ಮಾಡಬೇಡಿ ಎಂದು ಬಂದಿದ್ದರಿಂದ 2009–10ನೇ ಸಾಲಿನಲ್ಲಿ ಕೂಲಿಯ payment ಆಗದಿರುವುದೇ ಹೊರತು ಬೇರೆಯವು ಅಲ್ಲ. Current year ನದ್ದಾಗಲಿ, last year ನಲ್ಲಾಗಲಿ ಆ ತರಹ ಆಗಿಲ್ಲ. 2009–10ನೇ ಸಾಲಿನಲ್ಲಿ ಆ ರೀತಿ ಆಗಿದೆ. ಅದನ್ನೂ ಸಹಿತ ನಾವು pursue ಮಾಡುತ್ತಿದ್ದೇವೆ. ಆದಷ್ಟು ಬೇಗ Clearance ಕೊಡಿ, ನಾವು payment ಮಾಡಲಿಕ್ಕೆ ತಯಾರಿದ್ದೇವೆ, ಅದನ್ನು pursue ಮಾಡುತ್ತಿದ್ದೇವೆ. ಅದಕ್ಕೆ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಎಲ್ಲಿ ನಿಜವಾಗಿ ಕೆಲಸವಾಗಿದೆ, ಕೆಲಸ ಮಾಡಿದವರಿಗೆ payment ಆಗಲೇಬೇಕು. ಅದಕ್ಕೆ ಎಲ್ಲಾ ರೀತಿಯ efforts ಅನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : 3 ವರ್ಷಗಳಿಂದ ಅವರಿಗೆ ಕೂಲಿ ಸಿಕ್ಕಿಲ್ಲ. The purpose of this Act is, ಯಾರಿಗೆ ಕೂಲಿ ಸಿಗುವುದಿಲ್ಲವೋ, ಅವರಿಗೆ ಕೂಲಿ ಕೊಡಬೇಕು. ಯಾರಿಗೆ ಉದ್ಯೋಗ ಸಿಗುವುದಿಲ್ಲ ಅವರಿಗೆ ಕೆಲಸ ಕೊಡಬೇಕು. That is the intention of this Act. ಅವರಿಗೆ ಒಂದು ವರ್ಷದಲ್ಲಿ 100 ದಿನ ಕೆಲಸ ಕೊಡಬೇಕು ಎಂದಿದೆ. Enquiry ಮಾಡುವುದು, ಕ್ರಮ ತೆಗೆದುಕೊಳ್ಳುವುದು, ಶಿಕ್ಷೆ ಮಾಡುವುದು ಅದೊಂದು part ಇನ್ನೊಂದು part ಎಂದರೆ, ಯಾರಿಗೋಸ್ಕರ ಈ ಕಾಯಿದೆ ಬಂದಿದೆ, ಅವರ ಹತ್ತಿರ ಕೆಲಸ ಮಾಡಿಸಿಕೊಂಡು enquiry ಎನ್ನುವ ಕಾರಣಕ್ಕೋಸ್ಕರ ಅವರಿಗೆ ಕೂಲಿ ಕೊಡದಿರುವುದು ಸರಿಯಲ್ಲ. ಅವರಿಗೆ ವಾರಕ್ಕೊಂದು ಸಾರಿ ಕೂಲಿ ಕೊಡಬೇಕೆಂದಿದೆ. ಕೂಲಿ ಕೊಡದೇ ಹೋದರೆ ಅವರು ಗುಳೆ ಹೋಗುತ್ತಾರೆ. ಗುಳೆ ಹೋಗುವುದನ್ನು ತಪ್ಪಿಸಬೇಕು. ಬರಗಾಲ ಇದೆ. ಇಂಥ ಸನ್ನಿವೇಶದಲ್ಲಿ ಅನೇಕ ಕಡೆಗಳಲ್ಲಿ ಇಂಥ ಪ್ರಕರಣ ಆಗಿರುವುದರಿಂದ

ಮೊದಲು ಕೂಲಿ ಕೊಡುವ ಹಾಗೆ ಮಾಡಿ. Enquiry ಮಾಡುವುದನ್ನು ಮುಂದುವರಿಸಿ. ಯಾರು ತಪ್ಪಿತಸ್ಥರು ಇರುತ್ತಾರೋ ಅವರಿಗೆ enquiry ಮಾಡಿ ಶಿಕ್ಷೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ : ಇವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಅವರ ಹತ್ತಿರ ನಾನು delegation ಕರೆದುಕೊಂಡು ಹೋಗಿದ್ದೆ. ಮಾನ್ಯ ಸಚಿವರು ಎಲ್ಲರನ್ನೂ ಕರೆದು ಚರ್ಚಿಸಿದರು. ತಪ್ಪಾಗಿದ್ದೆಲ್ಲಿ? ಕೆಲಸ ಮಾಡಿದ್ದಾರೆ, ಕೂಲಿ ಕೊಡಬೇಕಾದುದು ನಿಜ. NMR draw ಆಗಿದೆ. Edit option ಇದೆ. Computer operators ತಪ್ಪು ಮಾಡಿದ್ದಕ್ಕೋಸ್ಕರ Government of India and State Government accounts reconcile ಆಗಲಿಲ್ಲ. ಆ ಕಾರಣಕ್ಕೋಸ್ಕರ ನಿಂತು ಹೋಯಿತು. ಆವಾಗ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಗೋ manage ಮಾಡಿ 2009–10ರ payment ಮಾಡಿಸಿದೆ. Edit option ಅನ್ನು ಈಗಲೂ ಕೂಡ ನೀವು ರಾಜ್ಯ ಸರ್ಕಾರಕ್ಕೆ extend ಮಾಡಿಸಿದರೆ ಇವತ್ತೂ ಕೂಡ ಆ problem solve ಆಗುತ್ತದೆ. NMR ಇದೆ. payment ಆಗಿರುವುದಕ್ಕೆ ಲೆಕ್ಕವಿದೆ. Estimate sanction ಆಗಿದೆ. Edit option ಸಿಗದಿರುವುದಿಕ್ಕೋಸ್ಕರ tally ಆಗುತ್ತಿಲ್ಲ Tally ಆಗದಿರುವುದರಿಂದ misappropriation ಆಗಿದ್ದು ಬಿಟ್ಟರೆ ಬೇರೆ ಏನೂ ಇಲ್ಲ. ಇದರ case to case study ಮಾಡಿದರೆ ಖಂಡಿತ ಇದು solve ಆಗುತ್ತದೆ. ದಯವಿಟ್ಟು ನಿಮ್ಮ CEO ಗಳನ್ನು pull up ಮಾಡಿ. ಆಗ ಅದು solve ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. 7 ದಿವಸಗಳ ಒಳಗಾಗಿ ಕೂಲಿಯ payment ಆಗಬೇಕೆಂದು ಒತ್ತಡ ಮಾಡುತ್ತಿದ್ದೇವೆ. ಬಹಳಷ್ಟು ಜಿಲ್ಲೆಗಳಲ್ಲಿ ಇದನ್ನು start ಮಾಡಿದ್ದೇವೆ. ನೇರವಾಗಿ ಮತ್ತು ತ್ವರಿತವಾಗಿ ನಮ್ಮ ಫಲಾನುಭವಿಗಳಿಗೆ ಕೂಲಿ ಹಣ ಮುಟ್ಟಬೇಕು. ಇದಕ್ಕೋಸ್ಕರ Electronic Fund Management

System ಅನ್ನು 7 ಜಿಲ್ಲೆಗಳಲ್ಲಿ pilot project ಆಗಿ ಜಾರಿಗೆ ತಂದಿದ್ದೇವೆ. ಅದು success ಆದರೆ within 7 days ನೇರವಾಗಿ ಅವರ account ಗೆ ಜಮೆ ಆಗುತ್ತದೆ. ಇದು ಕೆಲವು ಜಿಲ್ಲೆಗಳಲ್ಲಿ start ಆಗಿದೆ. ಅದು ಆದರೆ ಒಳ್ಳೆಯದಾಗುತ್ತದೆ. ನಾವು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. As early as possible payment ಆದಾಗ ಮಾತ್ರ ಅವರಿಗೆ ಅನುಕೂಲವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಅದು ಆಗುತ್ತಿದೆ. ಈಗ ಏನೂ problem ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹಿಂದಿನದರ ಬಗ್ಗೆ ಅದೇ ಸಮಸ್ಯೆ ಇದೆ. ಪೂರ್ಣವಾದ ಚಿತ್ರಣವನ್ನು ನಾನು ಕೊಡುತ್ತೇನೆ. ಕೇಂದ್ರ ಸರ್ಕಾರಕ್ಕೆ ನಾವು ಎಷ್ಟು ಸಲ proposal ಕಳುಹಿಸಿದ್ದೇವೆ ಎನ್ನುವುದನ್ನೂ ಕೊಡುತ್ತೇನೆ. ಅವರು 2–3 ಸಲ ಸ್ಪಷ್ಟೀಕರಣ ಕೇಳಿದ್ದು ನಮ್ಮ ಮುಂದಿದೆ. ನಾವು clearance ಕೊಡಲಾರದೆ payment ಮಾಡಬೇಡಿ ಎನ್ನುವ direction ಇದ್ದಿದ್ದರಿಂದ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬಂದಿದ್ದನ್ನು ನಾವು ಬಿಡುಗಡೆ ಮಾಡುವುದಕ್ಕೆ ನಮಗೇನು ತೊಂದರೆ ಇದೆ? ಅವರ direction ಇದ್ದಿದ್ದರಿಂದ ನಾವು ಸುಮ್ಮನೆ ಕುಳಿತಿದ್ದೇವಷ್ಟೆ. ಬೇರೆ ಏನೂ ಇಲ್ಲ. ಅದನ್ನು ನಾವು insist ಮಾಡುತ್ತಿದ್ದೇವೆ. ಇನ್ನೊಂದು ಸಲ ಕೇಂದ್ರ ಸಚಿವರನ್ನು ಭೇಟಿಯಾಗಿ ಇದರ ಬಗ್ಗೆ immediately clearance ಕೊಡಲಿಕ್ಕೂ ಹೇಳುತ್ತೇನೆ. ಹಿಂದೆ ಸಚಿವರಾದ ಶ್ರೀ ಜೈರಾಮ್ ರಮೇಶ್‌ರವನ್ನು ಭೇಟಿಯಾಗಿದ್ದಾಗ, ವಿಲಾಸರಾವ್ ದೇಶಮುಖ್‌ರವರನ್ನು ಭೇಟಿಯಾಗಿದ್ದಾಗ ಈ ಸಮಸ್ಯೆ ಬಗ್ಗೆ ಹೇಳಿದ್ದೆ. ನಾವು ಕಳುಹಿಸಿದ್ದ ರಿಪೋರ್ಟ್ ಪ್ರಕಾರ ಆದಷ್ಟು ಬೇಗ clearance ಕೊಡಿ ಎಂದು ಕೇಳಿದ್ದೆ. ಅದನ್ನು ನಂಬಿಕೊಂಡು ನೀವು ಕೊಡಿ ಎಂದು ಹೇಳಿದ್ದೆ. ಅಧಿಕಾರಿಗಳು ಕೆಲವೊಮ್ಮೆ ಸ್ಪಷ್ಟೀಕರಣ ಕೇಳುತ್ತಾರೆ. ಆ ದೃಷ್ಟಿಯಿಂದ ಸ್ವಲ್ಪ pending ಇದೆ. ಆದಷ್ಟು ಬೇಗ ಇನ್ನೂ ಪ್ರಯತ್ನ ಮಾಡೋಣ. ಇದರ ಜೊತೆಗೆ MLA fund ಬಗ್ಗೆ ಇತ್ತೀಚೆಗೆ ನಡೆದ BAC meetingನಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಇಲ್ಲಿಯವರೆಗೆ ಒಂದು system ಇತ್ತು. 25 ಲಕ್ಷ ರೂ. release ಮಾಡುವುದು. 1 ಕೋಟಿ ರೂ. MLA fund ಇದ್ದರೆ 25 ಲಕ್ಷ ರೂಪಾಯಿಗಳನ್ನು ಒಂದು ಕಂತಿನಲ್ಲಿ, 25 ಲಕ್ಷ ರೂಪಾಯಿಗಳನ್ನು ಎರಡನೇ ಕಂತಿನಲ್ಲಿ release ಮಾಡುವುದು, ಅಷ್ಟಕ್ಕೆ action plan ಮಾಡುವುದು, ಕೆಲಸ ಆದಮೇಲೆ completion certificate ಕೊಟ್ಟಮೇಲೆ ಮುಂದಿನ ಹಣ release ಮಾಡುವ system ಇತ್ತು. ನಾನು DC, CEO meeting ನಲ್ಲಿ Finance Secretary ಯವರಿಗೆ direction ಕೊಟ್ಟೆ. 1 ಕೋಟಿ ರೂಪಾಯಿಗಳ entire year ದ್ದು action plan ತೆಗದುಕೊಳ್ಳಿ, priority ಆಧಾರದ ಮೇಲೆ work order ಮಾಡಿ implement ಮಾಡಲಿಕ್ಕೆ start ಮಾಡಿ. ಯಾವುದು complete ಆಗುತ್ತದೋ ಅದಕ್ಕೆ ಹಣ release ಮಾಡಿಕೊಂಡು ಹೋಗುತ್ತೇವೆ. ಸಿದ್ದರಾಮಯ್ಯನವರೆ, ಅವರ ಕಡೆ ಹಣ ಇದೆ. ಆ ಹಣವನ್ನು ಖರ್ಚು ಮಾಡಬೇಕು. ಮೊನ್ನೆಯೂ discussion ಆಯಿತು. Guidelines ನಲ್ಲಿ ಕೆಲವು ಸಮಸ್ಯೆಗಳಿವೆ. ಮಾನ್ಯ ಕಾರಜೋಳ ರವರ ನೇತೃತ್ವದಲ್ಲಿ ಒಂದು report ಮಾಡುತ್ತೇವೆಂದರೆ.

ಶ್ರೀ ಹೆಚ್.ಡಿ. ರೇವಣ್ಣ : ಆ order ಇನ್ನೂ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : Guidelines ನಲ್ಲಿ ಕೆಲವು liberality ಅನ್ನು ಮಾಡಿದರೆ ಹಣವೂ ಖರ್ಚಾಗುತ್ತದೆ. ಕೆಲವು technical problems ನಿಂದ ಹಣ ಖರ್ಚಾಗಿಲ್ಲ. DC ಯವರು ಹಾಗೆಯೇ ಮಾಡಿಕೊಂಡು ಕುಳಿತ್ತಿದ್ದಾರೆ. It is the reality. ಹೀಗಾಗಿ guidelines ನಲ್ಲಿ ಏನು change ಮಾಡಬೇಕೋ ಅದನ್ನು ಮಾಡಲಿಕ್ಕೆ ನಾನು ತಯಾರಿದ್ದೇನೆ. ಹಣ ಇದೆ. 25 ಲಕ್ಷ ರೂಪಾಯಿ ಏನು release ಮಾಡಿದ್ದೇವೆ ಆ ಹಣ ಇದೆ, ಅದು ಪೂರ್ಣ ಖರ್ಚಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಸದನ ಮುಗಿಯುವುದರೊಳಗಾಗಿ issue ಮಾಡಿ ಕೊಟ್ಟರೆ ಒಳ್ಳೆಯದು.

ಶ್ರೀ ಜಗದೀಶ್ ಶೆಟ್ಟರ್ : ಆಯಿತು. ಮಾಡಿಸುತ್ತೇವೆ. Guidelines change ಮಾಡಬೇಕೆಂದು ಸಲಹೆ ಮಾಡಿದ್ದೀರಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನಾನು ಮತ್ತು ಬಂಡೆಪ್ಪ ಖಾಶೆಂಪೂರ್ ಕುಳಿತು discuss ಮಾಡಿದ್ದೇವೆ, change ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು. ಅದನ್ನು ನಾನು ತರಿಸಿಕೊಂಡು immediately issue ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : Law Minister is also there.

ಶ್ರೀ ಜಗದೀಶ್ ಶೆಟ್ಟರ್ : Immediately issue ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : Out of Rs. 300 crore, Rs.75 crore ಬಿಡುಗಡೆ ಮಾಡಿದ್ದೀರಿ. 25 ಲಕ್ಷ ಅಂದರೆ 75 ಕೋಟಿ ರೂಪಾಯಿ ಆಯಿತು. ಮೇಲ್ಮನೆ ಮತ್ತು ಎಲ್ಲಾ ಸದಸ್ಯರೂ ಸೇರಿದಂತೆ ಇನ್ನೂ 225 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಇನ್ನುಳಿದಿರುವುದು ಒಂದೂವರೆ ತಿಂಗಳು ಮಾತ್ರ. ಆಮೇಲೆ ಇವರ ಕೈಯಲ್ಲಿ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲ. ಆಮೇಲೆ MLA ಗಳ term ಮುಗಿಯುತ್ತದೆ. ಆ 225 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ Finance Department ನವರಿಗೆ ಆದೇಶ ಕೊಡಿ. ಅಷ್ಟೊತ್ತಿಗೆ ಇದೆಲ್ಲ plans estimate ಮಾಡಿಸಿ ಕೆಲಸ ಮಾಡಿಸಲಿಕ್ಕೆ ಅನುಕೂಲವಾಗುತ್ತದೆ. ಸ್ವಲ್ಪ lenient view ಇಡಿ.

ಶ್ರೀ ಜಗದೀಶ್ ಶೆಟ್ಟರ್ : Practical ಸಮಸ್ಯೆ ಏನೂ ಇಲ್ಲ. ನೀವೂ ಹಣಕಾಸು ಮಂತ್ರಿಯಾಗಿದ್ದಿರಿ.

ಶ್ರೀ ಸಿದ್ದರಾಮಯ್ಯ : ಅದಕ್ಕೇ ನಾನು ಹೇಳುತ್ತಿರುವುದು. ನಾನು ಹಣಕಾಸು ಇಲಾಖೆ ನೋಡಿ ನೋಡಿ ಸಾಕಾಗಿದೆ. 6 ವರ್ಷ ನೋಡಿದ್ದೇನೆ. ನೀವು ಈಗ 1 ವರ್ಷದಿಂದ ನೋಡುತ್ತಿದ್ದೀರಿ. ಅಲ್ಲಿಯೇ ಜಾಸ್ತಿ ಕೊಕ್ಕೆ ಬೀಳುವುದು. ಅವರು ಹಣ ಬಿಡುಗಡೆ ಮಾಡುವುದಿಲ್ಲ. ಕೆಲಸ ಆಗುವುದಿಲ್ಲ. Term ಮುಗಿಯುವುದರೊಳಗೆ ಕೆಲಸ ಆಗಬೇಕೆಂದರೆ 225 ಕೋಟಿ

ರೂಪಾಯಿಗಳನ್ನು ಬಿಡುಗಡೆ ಮಾಡಿ ಎಂದು ಅವರಿಗೆ ಸ್ಪಷ್ಟ direction ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ನಾನು ಹೇಳಿದ್ದೇನೆ. ಈಗಾಗಲೇ ಒಂದು ಕೋಟಿ ರೂಪಾಯಿಗಳಲ್ಲಿ 50 ಲಕ್ಷ ರೂಪಾಯಿ release ಮಾಡಿದ್ದೇವೆ. ಬಜೆಟ್‌ನಲ್ಲಿ ಏನು promise ಮಾಡಿದ್ದೇವೆ ಆ ಪ್ರಕಾರ ಮಾಡಿದ್ದೇವೆ. ಆ entire amount ಗೆ action paln ready ಮಾಡಿ administrative approval ಕೊಡುವುದಕ್ಕೆ DC ಯವರಿಗೆ direction ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಸುವರ್ಣ ಗ್ರಾಮೋದ್ಯೋಗಕ್ಕೆ ಹಣ ಬಿಡುಗಡೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಏಕೆಂದರೆ, ಅವು ಈಗ Approval ಆಗಿವೆ. ಕೆಲಸ ಪ್ರಾರಂಭ ಮಾಡಬೇಕಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ನಾವು RDPR ಗೆ ಹೇಳಿದ್ದೇವೆ. ಸುವರ್ಣ ಗ್ರಾಮೋದ್ಯೋಗಕ್ಕೆ ಸಂಬಂಧಪಟ್ಟಂತೆ estimate DPR, tender ಆಗಿ ಕೆಲಸ ಮಾಡಿಸಲಿಕ್ಕೆ direction ಕೊಟ್ಟಿದ್ದೇನೆ. ಅದಕ್ಕೆ ಏನು ಹಣ ಬೇಕೋ ಅದನ್ನು release ಮಾಡುವುದಕ್ಕೆ ತಯಾರಿದ್ದೇನೆ. MLA fund 50 ಲಕ್ಷ ರೂಪಾಯಿ release ಮಾಡಿದ್ದೇವೆ. Entire year ನ work ಕೊಡಬೇಕೆಂದು ಹೇಳಿದ್ದೇವೆ. ಅದು approval ಆಗಿ administration order ತೆಗೆದುಕೊಂಡು ಕೆಲಸ ಶುರು ಮಾಡುವುದಕ್ಕೆ ಹೇಳಿದ್ದೇವೆ. 50 ಲಕ್ಷ ಹಣ ಏನು ಇದೆ ಇದನ್ನು ಖರ್ಚು ಮಾಡಲಿ ಎಫ್‌ಡಿ ಯವರು ಹಣ ಬಿಡುಗಡೆ ಮಾಡುವುದಕ್ಕೆ ತಯಾರಿದ್ದಾರೆ. ಹಣದ ಸಮಸ್ಯೆ ಏನೂ ಇಲ್ಲ. ಆ work ಶುರು ಮಾಡಲಿ ಎನ್ನುವ ಮಾತನ್ನು ನಾನು ಹೇಳುತ್ತೇನೆ. SAP ಯ ಬಗ್ಗೆ ಹೇಳುವುದಾದರೆ, ಕಬ್ಬು ಬೆಳೆಗಾರು

ಅಧಿವೇಶನದ ಮೊದಲ ದಿನವೇ ತಾವು ಇದನ್ನು ಪ್ರಸ್ತಾಪಿಸಿದ್ದೀರಿ. ಆ ದಿನ ನಾನು SAP ಕಾನೂನು ತರುವುದಕ್ಕೆ ಪ್ರಾಮಿಸ್ ಮಾಡಿದ್ದೆ. ಆ ದಿವಸವೂ ನಾನೊಂದು ಮಾತು ಹೇಳಿದ್ದೆ. ಬೇರೆ ರಾಜ್ಯದವರು ಇದನ್ನು ಇಂಪ್ಲಿಮೆಂಟ್ ಮಾಡಿದ್ದಾರೆ. ಆ ಮಾಹಿತಿಯನ್ನು ನಾನು ತರಿಸಿಕೊಳ್ಳುತ್ತಿದ್ದೇನೆ. ಆ ಬಗ್ಗೆ ನಾವು ಸೀರಿಯಸ್ ಆಗಿ ಎಫರ್ಟ್ ಮಾಡುತ್ತಿದ್ದೇವೆ. ಬೇರೆ ರಾಜ್ಯದಲ್ಲಿ SAP ಕಾನೂನು ತಂದ ಮೇಲೆ ಅದರ ಪರಿಣಾಮಗಳೇನಾಗಿದೆ ಎಂಬುದರ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ. ಅಲ್ಲಿ ಇದು ಸಕ್ಸಸ್ ಆಗಿದೆಯೋ ಇಲ್ಲವೋ ಎಂಬುದನ್ನು ನೋಡಬೇಕಾಗಿದೆ, ಏಕೆಂದರೆ ಇದಾದ ಮೇಲೆಯೂ ಹೋರಾಟಗಳು ನಡೆದಿವೆ. ಉತ್ತರ ಪ್ರದೇಶದಲ್ಲಿ SAP ಕಾನೂನು ತಂದಿದ್ದಾರೆ. ಇದಾದ ಮೇಲೆ ಪ್ರತಿ ವರ್ಷವೂ ಕಬ್ಬು ದರ ನಿಗದಿ ಮಾಡುವ ಸಲುವಾಗಿ ಹೋರಾಟ ನಡೆದಿವೆ. ಇದರ ಪರಿಣಾಮಗಳನ್ನು ತಿಳಿದುಕೊಂಡು ಕೂಲಂಕಷವಾಗಿ ಚರ್ಚೆ ಮಾಡಿಕೊಂಡು ಇದಕ್ಕೊಂದು ಕಮಿಟಿ ಮಾಡಿದ್ದು ಅವರಿಗೂ ಕೂಡ ಈ ಬಗ್ಗೆ ಎಲ್ಲಾ ಮಾಹಿತಿ ತರಿಸಿಕೊಂಡು ವರದಿ ಕೊಡಿ ಎಂದು ಹೇಳಿದ್ದೇವೆ. ಅವರು ಕೊಟ್ಟ ಮೇಲೆ ಅಧಿವೇಶನ ಇಲ್ಲವೆಂದರೂ SAP ಬಗ್ಗೆ ಕನ್‌ಕ್ಲೂಡ್‌ಗೆ ಬಂದು proper ಆಗಿ concrete ಆಗಿ ಒಂದು proposal ಬಂತೆಂದರೆ ನಾನು ಕಾನೂನು ಮಾಡುವುದಕ್ಕೆ ತಯಾರಿದ್ದೇನೆ. ಅದು ಈ ಅಧಿವೇಶನ ಇಲ್ಲವೆಂದೂ ಸಹಿತ ನಾನು ordinance ಹೊರಿಡಿಸುವುದಕ್ಕೂ ತಯಾರಿದ್ದೇನೆ. ಇದು ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : Old-age pension ಗೆ ಹಣ ಬಿಡುಗಡೆಯಾಗಿಲ್ಲ. ಸುಮಾರು ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿದ್ದು ಅದು ರಿವೈವ್ ಆಗಿದೆ, ಅದು ವಜಾ ಆದ ದಿವಸದಿಂದಲೇ ಹಣ ಬಿಡುಗಡೆ ಮಾಡಬೇಕಾಗಿದೆ, ಆದರೆ ಹಣ ಟ್ರಜರಿಗೆ ಹೋಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಹಣ ಬಿಡುಗಡೆಯಾಗಿದೆ. ಯಾವುದು ಆಗಿಲ್ಲ ಎನ್ನುವುದರ ಬಗ್ಗೆ ತಮಗೊಂದು status report ಅನ್ನು ಕೊಡುತ್ತೇನೆ.

ಡಾ: ಹೆಚ್.ಸಿ. ಮಹಾದೇವಪ್ಪ : Old-age pension, widow pension, physically handicapped pension, ಇವೆನ್ನೆಲ್ಲಾ ಸ್ಥಗಿತಗೊಳಿಸಲಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್ : ಅದೂ ಯಾವುದೂ ಇಲ್ಲ. ಏನಾದರೂ ಎನ್‌ಕ್ವೈರಿ ಇದ್ದರೆ ಮತ್ತೊಂದು ಇದ್ದರೆ ಮಾತ್ರ ಅಂಥ ಪ್ರಕರಣಗಳಲ್ಲಿ ನಿಂತಿದೆಯೇ ಹೊರತು, ರೆಗ್ಯೂಲರರ್ ಆಗಿ ಬರುವುದಕ್ಕೆ ಯಾವುದೇ ತೊಂದರೆಯಾಗಿಲ್ಲ. ಹಣ ರಿಲೀಸ್ ಆಗಿದೆ. ಈ ಬಗ್ಗೆ status report ಅನ್ನು ನಾನು ನಿಮಗೆ ಕೊಡುವುದಕ್ಕೆ ತಯಾರಿದ್ದೇನೆ. ಉಳಿದಂತೆ ಕೃಷಿ, ಬಿಲ್ಡಿಂಗ್ ಇತರೆ ವಿಚಾರಗಳ ಬಗ್ಗೆ ಹೇಳಿದರು. ಅವುಗಳನ್ನು ನಾವು ರೆಗ್ಯೂಲರ್ ಬಜೆಟ್‌ನಲ್ಲಿ ಕನ್ಸಿಡಿರೇಷನ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು ವಿಚಾರವಾಗಿ ನಮ್ಮ ಬಗಲಿಯವರು ಹೇಳಿದರು. ಹಿಂದಿನ ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ಪರಿಹಾರ ಕೊಡುವ ಸಲುವಾಗಿ ರೂ. 30 ಕೋಟಿ ಕೊಡುತ್ತೇವೆಂದು ಪ್ರಾಮಿಸ್ ಮಾಡಿದ್ದರು. ಅದರಂತೆ ಅದಕ್ಕೆ ರೂ. 15ಕೋಟಿ ಮಾತ್ರ ಹಣ ರಿಲೀಸ್ ಆಗಿತ್ತು. ನಾನು ಇತ್ತೀಚೆಗೆ ಬಿಜಾಪುರ ಜಿಲ್ಲೆಗೆ ಹೋಗಿ ಆ ಭಾಗಕ್ಕೆ ಹೋಗಿದ್ದೆ. ಹಿಂದಿನ ಸರ್ಕಾರದ ಆದೇಶದಂತೆ ರೂ.30 ಕೋಟಿ ಕೊಡಬೇಕಾಗಿದ್ದು ಅದರಲ್ಲಿ ಈಗಾಗಲೇ ರೂ.15 ಕೋಟಿ ಕೊಟ್ಟಿದೆ, ಉಳಿದ ರೂ.15 ಕೋಟಿ ಕೊಡುವುದು ಬಾಕಿ ಇತ್ತು. ಈಗಾಗಲೇ ನಮ್ಮ ಹಣಕಾಸಿನ ಇಲಾಖೆಗೆ ನಿರ್ದೇಶನ ಕೊಟ್ಟಿದ್ದೇನೆ. 15 ಕೋಟಿ ಏನು ಬಿಡುಗಡೆಯಾಗ ಬೇಕಾಗಿತ್ತು ಅದನ್ನು ಬಿಡುಗಡೆ ಮಾಡಬೇಕೆನ್ನುವ ಡೈರೆಕ್ಷನ್ ಕೊಟ್ಟಿದ್ದೇನೆ. ಅದನ್ನು ಆದಷ್ಟು ಬೇಗನೆ ಮಾಡುತ್ತೇನೆ.

ಡಾ: ಹೆಚ್.ಸಿ. ಮಹಾದೇವಪ್ಪ : SC-ST ಗೆ 60 ಕೋಟಿ ರೂಪಾಯಿಗಳನ್ನು ಕೊಡುವುದು ಪೆಂಡಿಂಗ್ ಇದೆ. ಅದನ್ನು ರಿಲೀಸ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಕುಡಿಯುವ ನೀರಿನ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸನ್ಮಾನ್ಯ ಮುಖ್ಯಮಂತ್ರಿಗಳೇ, PMGSY Central government matching grant ನಲ್ಲಿ ಕೆಲಸಗಳು ಆಗಿಲ್ಲ.

ಅಧ್ಯಕ್ಷರು : ಎಲ್ಲರೂ ಹೀಗೆ ಎದ್ದು ನಿಂತರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಈಗ RDPR ಬಗ್ಗೆ ಚರ್ಚೆ ನಡೆಯುತ್ತಿದೆ, ಕುಡಿಯುವ ನೀರಿನ ಮೇಲೆ ಚರ್ಚೆಯಾದ ಮೇಲೆ ಸದನದಲ್ಲಿ ಉತ್ತರ ಕೊಡುತ್ತೇವೆ. ಕುಡಿಯುವ ನೀರಿನ status ಏನಿದೆ, ಎಷ್ಟು ಅಮೌಂಟ್ ಬಿಡುಗಡೆ ಆಗಿದೆ? ಇನ್ನು ಯಾವ ರೀತಿಯಾಗಿ ಸ್ಪೆಷಲ್ ಆಗಿ ಕೊಡಬೇಕು, ಈ ಎಲ್ಲದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ರೇವಣ್ಣನವರು ಅದನ್ನು ಪ್ರಾರಂಭಿಸಿದ್ದಾರೆ, ಅದರಲ್ಲಿ ಡಿಟೇಲ್ ಆಗಿ ಉತ್ತರ ಕೊಡುತ್ತೇನೆ. PMGSY

ಶ್ರೀ ಕೆ.ಎಂ. ಶಿವಲಿಂಗೇಗೌಡ : PMGSY ದ್ದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾತನಾಡಿ ಮುಗಿಸುತ್ತೇನೆ. ಆಮೇಲೆ ನೀವು ಹೇಳಿ. PMGSY ದ್ದು ನಾನು ದಯಮಾಡಿ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ದಯವಿಟ್ಟು ನೀವು ಒತ್ತಾಯ ಮಾಡಿ. ಏಕೆಂದರೆ, ಕಳೆದ 4 ವರ್ಷಗಳಿಂದ PMGSY ಯಲ್ಲಿ ಒಂದು ಕಿಲೋಮೀಟರ್ ಬರಲಿಲ್ಲ. ಇಲ್ಲಾರಿ ಬಂದಿಲ್ಲ ಬೇಕಾದರೆ ನೀವು ನೋಡಿ.

ಶ್ರೀ ಸಿದ್ದರಾಮಯ್ಯ : ಕಳೆದ ವರ್ಷ ಈ ವರ್ಷ.

ಶ್ರೀ ಜಗದೀಶ್ ಶೆಟ್ಟರ್ : ನಾಲ್ಕು ವರ್ಷಗಳಿಂದ ಬಂದಿಲ್ಲ ತಾವು ಬೇಕಾದರೆ ವೆರಿಫೈ ಮಾಡಿ.

ಶ್ರೀ ಸಿದ್ದರಾಮಯ್ಯ : ನೀವು ಬಂದು ನಾಲ್ಕೂವರೆ ವರ್ಷಗಳಾಯಿತು, ಮೇಡಂ ಶೋಭಾ ಕರಂದ್ಲಾಜೆಯವರು ಇದ್ದಾಗ ಬರಲಿಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ : ಬಂದಿಲ್ಲ. ಬಂದಿಲ್ಲ. ನಾನು ಮಾನ್ಯ ಸಚಿವರಾದ ಜೈರಾಮ್ ರಮೇಶ್‌ರವರಿಗೆ ಪ್ರಪೋಸಲ್ ಕೊಟ್ಟಿದ್ದೇವೆ. 100% ಕೊಡುವುದಕ್ಕಾಗುವುದಿಲ್ಲವೆಂದು ಅವರು ಹೇಳಿದರು. OK 100%

ಕೊಡುವುದು ಬೇಡ, ನಾವು ರಾಜ್ಯದವರು ನಿಮಗೆ ಷೇರ್ ಮಾಡುತ್ತೇವೆ. ಅವರು ಮೊದಲು 50% ಎಂದರೂ ಆಗುವುದಿಲ್ಲವೆಂದರೆ, ಕೊನೆಗೆ 25% ಷೇರ್ ಮಾಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಾವು ಹೇಳುತ್ತೇವೆ ನೀವು ಪತ್ರ ಬರೆಯಿರಿ.

ಶ್ರೀ ಜಗದೀಶ್ ಶೆಟ್ಟರ್ : yes. ನಾನು ಮೊನ್ನೆ ಹೋದಾಗಲೂ ಹೇಳಿ ಬಂದಿದ್ದೇನೆ. ಈ ಜನವರಿಯಲ್ಲಿ order ಮಾಡುತ್ತೇನೆಂದು ಹೇಳಿದ್ದಾರೆ. ನೀವು ಸ್ವಲ್ಪ insist ಮಾಡಿ ಅದರಿಂದಾದರೂ 4 ಸಾವಿರ ಕಿ.ಮೀ. ಬರುತ್ತದೆ, ಇದಕ್ಕೆ ನಾವು 25% ಷೇರ್ ಮಾಡುವುದಕ್ಕೆ ತಯಾರಿದ್ದೇವೆ. ಈಗಾಗಲೇ ಒಪ್ಪಿಗೆ ಕೊಟ್ಟಿದ್ದೇವೆ. ಕೆಲವು ಪ್ರಮುಖವಾದ ವಿಚಾರಗಳ ಬಗ್ಗೆ ಈ ಒಂದು ಪೂರಕ ಬಜೆಟ್‌ನ್ನು ಮಂಡನೆ ಮಾಡಿದ್ದೇನೆ. ದಯವಿಟ್ಟು ತಾವು ಒಪ್ಪಿಗೆ ಕೊಡಬೇಕು ಎನ್ನುವ ವಿನಂತಿ ಮಾಡುತ್ತೇನೆ.

ಶ್ರೀ ದುರ್ಯೋಧನ ಐಹೊಳೆ : ನಮ್ಮ ಗ್ರಾಮ ನಮ್ಮ ರಸ್ತೆದು 30 ಕಿ.ಮೀ. ಟೆಂಡರ್ ಕರೆದಿಲ್ಲ.

ಅಧ್ಯಕ್ಷರು : ಕೇಂದ್ರ ಸರ್ಕಾರ ದುಡ್ಡು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ ಮತ್ತೆ ಕೇಳುತ್ತೀರಲ್ಲಾ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : 100 ಕೋಟಿ ರೂಪಾಯಿಗಳನ್ನು ಕೆರೆಗಳಿಗೆಂದು ಕೊಟ್ಟಿದ್ದೀರಿ. ಅದರಲ್ಲಿ ತಾವು ಒಂದು ಸೂಚನೆ ಕೊಡಬೇಕು. ಏಕೆಂದರೆ, ಅನೇಕ ಕಡೆ ಕರೆ ಕೆಲಸಗಳಾಗಿಲ್ಲ. ಪ್ರಾರಂಭವಾಗಿ ಮುಗಿಸದೇ ಹಾಗೆ ಬಿಟ್ಟು ಬಿಟ್ಟಿದ್ದಾರೆ. ಆಮೇಲೆ ಹಾಗೆ ಬಿಲ್ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಇಂಜಿನಿಯರ್‌ಗಳು ಕಂಟ್ರಾಕ್ಟರ್‌ಗಳ ಸೇರಿಕೊಂಡು ಹಾಗೆ ಹೊಡೆದು ಬಿಡುತ್ತಾರೆ, ಹುಷಾರಾಗಿ ಅವೆಲ್ಲಾ ಮಾಡಬೇಕು. ಮತ್ತೆ ಅವನ್ನೆಲ್ಲಾ ಇನ್ಸ್‌ಪೆಕ್ಷನ್ ಮಾಡಿಸಿ ಮಾಡದೇ ಹೋದರೆ ದುಡ್ಡು ತಿಂದು ಬಿಡುತ್ತಾರೆ, ಹೀಗಾಗಿ ಅದನ್ನು ಬಿಗಿ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : OK.

ಮಾನ್ಯ ಸಭಾಧ್ಯಕ್ಷರೆ, ದಿನಾಂಕ 31–03–2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : 2012–13ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವು ಹೀಗಿದೆ :

ದಿನಾಂಕ : 31–03–2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವದ ಪರವಾಗಿರುವವರು “ಹೌದು” ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವರು “ಇಲ್ಲ” ಎಂದು ಸೂಚಿಸಬೇಕು
ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ
ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪೂರಕ ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

1. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಕೃಷಿ ಮತ್ತು ತೋಟಗಾರಿಕೆ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 28147.50 ಲಕ್ಷ ರೂ.ಗಳಿಗೆ ವೀರದ ಇನ್ನೂ ಹೆಚ್ಚಿನ ಮೊಬಲಗಳನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

2. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಪಶುಸಂಗೋಪನೆ ಮತ್ತು ಮೀನುಗಾರಿಕೆ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3479.92 ಲಕ್ಷ ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 179.49 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗಳನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

3. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಆರ್ಥಿಕ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5386.79 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1519.08 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗಳನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

4. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4558.54 ಲಕ್ಷ ರೂ.ಗಳಿಗೆ ವೀರದ ಇನ್ನೂ ಹೆಚ್ಚಿನ ಮೊಬಲಗಳನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

5. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಒಳಾಡಳಿತ ಮತ್ತು ಸಾರಿಗೆ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 23003.36 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1600.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

6. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 83975.77 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 23939.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

7. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3795.29 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

8. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಸಹಕಾರ"** ಇದಕ್ಕೆ ಸಂಬಂಧಿಸಿದ ವೆಚ್ಚಗಳು ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 185014.36 ಲಕ್ಷಗಳ ಮತ್ತು ಬಂಡವಾಳ ಲೆಕ್ಕದಲ್ಲಿ 600.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

9. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಸಮಾಜ ಕಲ್ಯಾಣ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 18121.63 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

10. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ

ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1492.32 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 200.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

11. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 517.75 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 17.98 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

12. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಆಹಾರ ಮತ್ತು ನಾಗರೀಕ ಸರಬರಾಜು"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1312.22 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

13. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಕಂದಾಯ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 42247.06 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

14. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಮಾಹಿತಿ ತಂತ್ರಜ್ಞಾನ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 30.16 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

15. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ವಸತಿ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 50951.06 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

16. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಶಿಕ್ಷಣ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 98219.01 ಲಕ್ಷಗಳ ಮತ್ತು ಬಂಡವಾಳ ಲೆಕ್ಕದಲ್ಲಿ 3360.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

17. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ವಾಣಿಜ್ಯ ಮತ್ತು ಕೈಗಾರಿಕೆ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1382.82 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 4532.99 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

18. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ನಗರಾಭಿವೃದ್ಧಿ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4788.77 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

19. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಲೋಕೋಪಯೋಗಿ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 14642.10 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 52100.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

20. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಜಲ ಸಂಪನ್ಮೂಲ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1748.22 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 4330.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

21. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಆರೋಗ್ಯ ಮತ್ತು ಕುಟುಂಬ ಕಲ್ಯಾಣ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ

ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 15783.59 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1101.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

22. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಕಾರ್ಮಿಕ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4904.41 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

23. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಇಂಧನ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 125176.25 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

24. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಕನ್ನಡ ಮತ್ತು ಸಂಸ್ಕೃತಿ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 474.40 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

25. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 821.79 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 500.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರುಮಾಡುವುದು.

26. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಕಾನೂನು"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3174.77 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

27. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ **"ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ"** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ

ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1294.97 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

6. ಶಾಸನ ರಚನೆ :

I. ವಿಧೇಯಕವನ್ನು ಮಂಡಿಸುವುದು

ಮಂಡನೆಗೆ ಅನುಮತಿ ಕೋರಿಕೆ

ಕರ್ನಾಟಕ ಧನವಿನಿಯೋಗ (ಸಂಖ್ಯೆ:4) ವಿಧೇಯಕ, 2012 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳ) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:4) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ :

2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:4) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.